*Sri S. D. KOTHAVALE (Chikodi).—I was a Member of the Select Committee on several occasions in Bombay. There was no prevention or prohibition prohibiting Members of the Select Committee to speak. He may speak but he has to support the recommendations of the Committee. The only restriction placed upon such a Member is that he should not divulge the discussions in the Select Committee. But for that, he is absolutely free to speak in support of the recommendations to which he is a party and there is no prohibition. There ought not to be a prohibition upon a Member of the Select Committee to make a speech in this House.

Mr. SPEAKER.—That is my impression also.

*ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಮಸೂದೆಯನ್ನು ಪರಿಣತರು . . . . .

ಒಬ್ಬ ಸದಸ್ಯರು.—ಯಾರು ಸ್ವಾಮಿ, ಪರಿಣತರು ?

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಂಗ್ಲೀಷ್‌ನಲ್ಲಿ "ಸೆಲೆಕ್ಟ್ ಕಮಿಟಿ" ಎನ್ನುವುದಕ್ಕೆ ಬದಲಾಗಿ, "ಪರಿಣತರು" ಎಂದೆ. ಹೋಗಲಿ ಬಿಡಿ. ಸೆಲೆಕ್ಟ್ ಕಮಿಟಿಯವರು ಎಂತಲೇ ಅನ್ನುತ್ತೇನೆ.

ಅಧ್ಯಕ್ಷರು.—ಮದರಾಸಿನಲ್ಲೂ ಇಂಗ್ಲೀಷ್ ಪದ ಉಪಯೋಗ ಮಾಡುವುದು ಆದಷ್ಟು ಕಡಮೆಯಾಗಿದೆ ಎಂದು ತಿಳಿದು ಬಂದಿದೆ. ಆದ್ದರಿಂದ ನಾವೂ ಕನ್ನಡ ಶಬ್ದವನ್ನೇ ಉಪಯೋಗಮಾಡೋಣ.

ಶ್ರೀ ಎಲ್. ಎಸ್. ವೆಂಕಾಜಿರಾವ್ (ಬಸವನಗುಡಿ).—ಪರಿಣತರು, ತಜ್ಞರು ಎಂದರೆ 'experts' ಎಂದು ಆಗುತ್ತದೆ.

ಅಧ್ಯಕ್ಷರು.—ಪರಿಣತರು ಎಂದು ಅವರು ಹೇಳಿದರು, ಅವರಿಗೆ ಏನು ತೋರುತ್ತದೋ ಅದನ್ನು ಹೇಳಲಿ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಮಸೂದೆ ಚುನಾಯಿತ ಸದಸ್ಯರಿಂದ ಪರಿಶೀಲನೆ ಮಾಡಲ್ಪಟ್ಟು ಯಾವ ರೂಪದಲ್ಲಿ ಈ ಶಾಸನ ಸಭೆಯ ಮುಂದೆ ಬಂದಿದೆಯೋ ಅದಕ್ಕೆ ಬೆಂಬಲ ಕೊಡುತ್ತಾ ಒಂದೆರಡು ಅಂಶಗಳನ್ನು ತಿಳಿಸಲು ನಾನು ನಿಂತಿದ್ದೇನೆ. ಮೊದಲು ಈ ಒಂದು ಮಸೂದೆ ನಮ್ಮ ಮುಂದೆ ಬಂದಾಗ ಈ ಶಾಸನ ಸಭೆಯಲ್ಲಿ ಚರ್ಚೆಯಾದಾಗ ಅನೇಕ ಅಂಶಗಳು ತಿದ್ದುಪಾಟಾಗ ಬೇಕಾದ್ದು ಇದರಲ್ಲಿದೆ ಎಂದು ಹೇಳಿ ಮಾನ್ಯ ಶಾಸನ ಸಭೆಯ ಸದಸ್ಯರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಇದರಲ್ಲಿ ಮುಖ್ಯವಾದದ್ದು ಯಾವುದೆಂದರೆ ಮೊದಲನೆಯದು ಸ್ಲ್ಯಾಬ್ ಸಿಸ್ಟಂನಲ್ಲಿ ಪ್ರತಿ ಮನುಷ್ಯನ ಒಂದು ಒಟ್ಟು ವ್ಯಾಪಾರದಲ್ಲಿ 5,000 ರೂಪಾಯಿಗೆ ಮೀರಿದಂಥ ಹಣದ ಮೇಲೆ ಅವನು ಎಷ್ಟು ಟರ್ನ್‌ಓವರ್ ಟ್ಯಾಕ್ಸ್ ಕೊಡಬೇಕೆಂದು ಹೇಳಿ ಒರಿಜಿನಲ್ ಬಿಲ್‌ನಲ್ಲಿ ನಮೂದಾಗಿತ್ತು, ಆ ಒಂದು ಮಿತಿಯನ್ನು ಏನೂ ಗೊತ್ತುಮಾಡದೆ ಅದರಲ್ಲಿ ಯಾವ ಸಣ್ಣಪುಟ್ಟ ವ್ಯಾಪಾರಿಗಳು ಅನ್ವಯಗೊಳ್ಳುತ್ತಾರೆ ಅವರಿಗೆ ಒಂದು ರಿಯಾಯಿತಿ ತೋರಿಸಬೇಕೆಂಬುದು ಮೊದಲನೆಯದು. ಎರಡನೆಯದು ಈ ಒಂದು ಸ್ಲ್ಯಾಬ್ ಸಿಸ್ಟಂನಲ್ಲಿ ಇನ್ನೊಬ್ಬರಿಂದ ತೆರಿಗೆಯನ್ನು ವಸೂಲು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡದೇ ಇರತಕ್ಕ ಒಂದು ವಿಷಯವನ್ನು ಅಲ್ಲಿ ನಮೂದಿಸಿದ್ದರು. ಅದು ಸರಿಹೋಗತಕ್ಕದ್ದಲ್ಲ, ಮಾರಾಟ ತೆರಿಗೆ ಎಂದರೆ ಯಾರಿಗೆ ಸಾಮಾನನ್ನು ಮಾರುತ್ತಾರೋ ಅಥವಾ ಯಾರು ಸಾಮಾನನ್ನು ಕೊಂಡುಕೊಳ್ಳುತ್ತಾರೋ ಅಂತಹವರಿಂದ ವಸೂಲು ಮಾಡುವುದಕ್ಕೆ ಅವಕಾಶಕೊಡಬೇಕೆಂಬ ವಿಷಯವನ್ನು ಪ್ರಸ್ತಾಪಿಸಿ ಚುನಾಯಿತ ಸದಸ್ಯರು ಅದನ್ನು ಪರಿಶೀಲಿಸಬೇಕೆಂದು ಸಲಹೆ ಮಾಡಿದ್ದರು. ಹಾಗೆಯೇ ಮೊದಲು ಮಸೂದೆಯಲ್ಲಿ ಕೇವಲ ಮೂರು ಷೆಡ್ಯೂಲುಗಳನ್ನು ನಮೂದುಮಾಡಿ, ಅನೇಕ ಮಾರಾಟ ವಸ್ತುಗಳನ್ನು ಅದರಲ್ಲಿ ನಮೂದಿಸಿದ್ದರು. ಅದು ಸ್ವಲ್ಪ ವ್ಯಾಪಾರಗಾರರಿಗೆ ಒಂದು ಗೊಂದಲವನ್ನು ಉಂಟುಮಾಡುತ್ತದೆ. ಅದನ್ನು ಸ್ಪಷ್ಟೀಕರಿಸಿ, ಯಾವ ಯಾವ ಪದಾರ್ಥಗಳಿಗೆ ಮಾರುವ ಮೂಲದಲ್ಲಿ ಒಂದೇ ಪಾಯಿಂಟ್‌ನಲ್ಲಿ ತೆರಿಗೆಯನ್ನು ಹಾಕಬಹುದು, ಯಾವ ಪದಾರ್ಥಗಳಿಗೆ ಕೊಳ್ಳುವ ಮೂಲದಲ್ಲಿ ತೆರಿಗೆಯನ್ನು ಹಾಕಬಹುದು, ಯಾವ ಪದಾರ್ಥಗಳ ಮೂಲವನ್ನು ಕಂಡು ಹಿಡಿಯುವುದಕ್ಕೆ ಆಗದೆ ಬಹು ಮುಖಗಳಲ್ಲಿ ತೆರಿಗೆಯನ್ನು ಹಾಕಬೇಕಾಗುತ್ತದೆ ಎಂಬುದನ್ನು ವಿವರಿಸಿ, ಒಂದು ಪರಿಶಿಷ್ಟದಲ್ಲಿ ಕೊಡಬೇಕೆಂದೂ ಕೂಡ ಸಲಹೆ ಮಾಡಿದ್ದಾರೆ. ಅದನ್ನೆಲ್ಲಾ ಪರಿಣತರ ಸಮಿತಿ ಮನಸ್ಸಿನಲ್ಲಿಟ್ಟುಕೊಂಡು ಈ ವರದಿಯನ್ನು ತಯಾರು ಮಾಡಿದ್ದಾರೆ. ಮೂರು ಷೆಡ್ಯೂಲುಗಳು ಇದ್ದಂಥ ಒಂದು ಬಿಲ್ಲನ್ನು ಬದಲಾಯಿಸಿ 5 ಷೆಡ್ಯೂಲುಗಳನ್ನು ವಿಂಗಡಿಸಲಾಗಿದೆ. ಆರೀತಿ ವಿಂಗಡಿಸುವುದಕ್ಕೆ ಮೂಲವಾದ ಉದ್ದೇಶವೇನೆಂದರೆ, ಯಾವ ಪದಾರ್ಥಗಳಿಗೆ ಮಾರುವ ಮೂಲ ಸಿಕ್ಕುತ್ತದೆಯೋ ಅವಕ್ಕೆ ಒಂದೇ ಕಡೆ ತೆರಿಗೆಯನ್ನು ಹಾಕಿದರೆ ಮಾರಾಟಗಾರರಿಗೂ ಅನುಕೂಲ ಮತ್ತು ಇಲಾಖೆಯವರಿಗೂ ಕೂಡ ಆ ತೆರಿಗೆಯನ್ನು ವಸೂಲುಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ ಎಂಬ ದೃಷ್ಟಿಯಿಂದ ಅದನ್ನು ಒಂದು ಷೆಡ್ಯುಲ್‌ನಲ್ಲಿ ಕೊಟ್ಟಿದ್ದಾರೆ. ಅದೇ ರೀತಿ ಯಾವ ಪದಾರ್ಥಗಳಿಗೆ ಕೊಳ್ಳುವ ಮೂಲ ಸಿಕ್ಕುತ್ತದೆಯೋ ಅದಕ್ಕೆ ಒಂದೇ ಕಡೆ ತೆರಿಗೆಯನ್ನು ಹಾಕಿ ಅದನ್ನು ವಸೂಲು ಮಾಡಿಕೊಳ್ಳುವುದಕ್ಕೆ ಅನುಕೂಲವಾದ ರೀತಿಯಲ್ಲಿ ಇನ್ನೊಂದು ಷೆಡ್ಯೂಲ್ ಮಾಡಿದ್ದಾರೆ. ಹೀಗೆಯೇ ಯಾವಯಾವ ಪದಾರ್ಥಗಳಿಗೆ ಮಾರುವ ಮೂಲವಾಗಲಿ ಅಥವಾ ಕೊಳ್ಳುವ ಮೂಲವಾಗಲಿ ಸಿಕ್ಕುವುದಿಲ್ಲವೋ ಅಂತಹ ಪದಾರ್ಥಗಳ ಮೇಲೆ ಬಹು ಮೂಲಗಳಲ್ಲಿ ನಮ್ಮ ದೇಶದ ಸುತ್ತಲೂ ಇರತಕ್ಕ ನೆರೆಯ ಪ್ರಾಂತ್ಯಗಳಿಗೆ ಯಾವ ವಿಧದಲ್ಲೂ ತೊಂದರೆಯಾಗದ ಹಾಗೆ ನೋಡಿಕೊಂಡು, ಇಲ್ಲಿನ ವ್ಯಾಪಾರ ಬಹಳ ಚನ್ನಾಗಿ ನಡೆಯಬೇಕು, ವ್ಯಾಪಾರಕ್ಕೆ ಯಾವ ವಿಧದಲ್ಲೂ ಧಕ್ಕೆ ಬರಬಾರದು ಎಂಬ ದೃಷ್ಟಿಯನ್ನಿಟ್ಟುಕೊಂಡು, ಎರಡು ಅಥವಾ ಮೂರು ಮುಖಗಳಲ್ಲಿ ತೆರಿಗೆಯನ್ನು ವಸೂಲು ಮಾಡಿಕೊಳ್ಳುವುದಕ್ಕೆ ಮತ್ತೊಂದು ಷೆಡ್ಯುಲನ್ನು ಹಾಕಿದ್ದಾರೆ. ಹೀಗೆಯೇ ಇನ್ನೊಂದು ಷೆಡ್ಯುಲನಲ್ಲಿ ಯಾವ ಯಾವ ಪದಾರ್ಥಗಳಿಗೆ ಮಾರಾಟ ತೆರಿಗೆ ವಿಧಿಸುವುದಿಲ್ಲ

(ಶ್ರೀ ಎ. ವಿ. ನರಸಿಂಹರೆಡ್ಡಿ)

ಎಂಬುದನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಹೀಗೆ ಚುನಾಯಿತ ಸದಸ್ಯರು ಏನೊಂದು ವರದಿಯನ್ನು ಶಾಸನ ಸಭೆಯ ಮುಂದೆ ಈಗ ಇಟ್ಟಿದ್ದಾರೆ. ಇದು ಮೊದಲಿದ್ದಂತಹ ಮೂಲ ಮಸೂದೆಗಿಂತಲೂ ಸ್ಪಷ್ಟವಾಗಿದೆ, ಇನ್ನೂ ಸ್ಪಷ್ಟೀಕರಣ ಮಾಡಿದ್ದೇವೆ ಎಂಬುದನ್ನು ತಿಳಿಸುವುದಕ್ಕೆ ಬಯಸುತ್ತೇನೆ.

Mr. SPEAKER.—The House will now rise for lunch and meet at 4 P.M.

The House adjourned for lunch at Thirty Minutes past Three of the Clock and re-assembled at four of the Clock.

[Mr. Deputy SPEAKER in the Chair]

ಶ್ರೀ ಎ. ವಿ. ನರಸಿಂಹರೆಡ್ಡಿ—ಸ್ವಾಮಿ, ನಾನು ಈ ಷೆಡ್ಯೂಲುಗಳನ್ನು ಕುರಿತು ಯಾವರೀತಿ ಮೊದಲಿನ ಬಿಲ್‌ಗಿಂತಲೂ ಈ ಒಂದು ಚುನಾಯಿತ ಸಮಿತಿ ಸಭೆಯ ಮುಂದೆ ಇಟ್ಟಿರತಕ್ಕ ವರದಿ ಮತ್ತು ಏನು ಮಸೂದೆಯನ್ನು ತಂದಿದ್ದಾರೆ ಅದರಲ್ಲಿ ಸ್ಪಷ್ಟವಾದ ರೀತಿಯಲ್ಲಿ ಅನೇಕ ಮಾರಾಟ ವಸ್ತುಗಳನ್ನು ವಿಂಗಡಿಸಿದ್ದಾರೆ ಎಂದು ಹೇಳುತ್ತಿದ್ದೆ. ಅಷ್ಟೇ ಅಲ್ಲದೆ ಈ ಮಸೂದೆಯು ಮಂಡಿತವಾದಾಗ ಚರ್ಚೆಯ ಕಾಲದಲ್ಲಿ ಆಹಾರ ಪದಾರ್ಥಗಳ ಮೇಲೆಯೂ ಕೂಡ ಮಾರಾಟ ತೆರಿಗೆಯನ್ನು ವಿಧಿಸತಕ್ಕದ್ದು ಎಂದಿತ್ತು. ಇಲ್ಲಿ ಮಾತನಾಡಿದ ಸದಸ್ಯರು ಆಹಾರ ಪದಾರ್ಥಗಳ ಮೇಲೆ ಮಾರಾಟ ತೆರಿಗೆಯನ್ನು ಹಾಕಬಾರದು, ಈಗಾಗಲೇ ಸಾಮಾನ್ಯ ಮನುಷ್ಯನ ಜೀವನವೆಚ್ಚ ಹೆಚ್ಚಾಗಿದೆ ಈ ಒಂದು ಅತ್ಯಾವಶ್ಯಕವಾದಂಥ ಆಹಾರ ಪದಾರ್ಥಗಳ ಮೇಲೆಯೂ ಕೂಡ ತೆರಿಗೆಯನ್ನು ವಿಧಿಸಿದರೆ ಆತನ ಪರಿಸ್ಥಿತಿ ಸುಧಾರಿಸುವುದಕ್ಕಿಂತಲೂ ಇನ್ನೂ ಕಷ್ಟಕ್ಕೆ ಈಡಾಗುತ್ತದೆ ಎಂದು ಸಲಹೆಮಾಡಿದರು. ಅದನ್ನು ಕೂಡ ಗಮನದಲ್ಲಿಟ್ಟುಕೊಂಡು ಈ ಒಂದು ಚುನಾಯಿತ ಸಮಿತಿಯು ಎಲ್ಲ ರಚನಾತ್ಮಕವಾದ ಟೀಕೆಗಳಿಗೂ ಗಮನವನ್ನು ಕೊಟ್ಟು, ತಿದ್ದುಪಾಟುಮಾಡಿ, ಈ ವರದಿಯನ್ನು ಕೊಟ್ಟಿದ್ದಾರೆ. ಅಲ್ಲದೆ, Note of dissent ಎಂದು ಏನು ಮೂರು ಭಾಗಗಳಲ್ಲಿ ಕೊಟ್ಟಿದ್ದಾರೋ ಅದರ ಬಗ್ಗೆ ನನ್ನ ಸ್ನೇಹಿತರಾದ ಶ್ರೀಮಾನ್ ಷಂಸುದ್ದೀನ್ ಅವರು ಪ್ರಸ್ತಾಪಮಾಡಿದ್ದಾರೆ. ಮುಖ್ಯವಾಗಿ ಮೂರನೆಯ Note of dissent ನಲ್ಲಿ ಕೆಲವು ಪದಾರ್ಥಗಳನ್ನು exempted goods listನಲ್ಲಿ ತರಬೇಕಾಗಿತ್ತು, ಅವುಗಳಮೇಲೆ ತೆರಿಗೆಯನ್ನು ವಿಧಿಸದಂತೆ ಮಾಡಬೇಕಾಗಿತ್ತು ಎಂದು ಕೆಲವು ಪದಾರ್ಥಗಳನ್ನು ಇದರಲ್ಲಿ ಕೊಟ್ಟಿದ್ದಾರೆ. ಆ Note of dissent ಏನಿದೆಯೋ ಅದನ್ನು ಪುಷ್ಟೀಕರಿಸಿ ಮಾತನಾಡುತ್ತ ನಮ್ಮ ಸ್ನೇಹಿತರು ಕೆಲವರು ಇವು ಸಾಮಾನ್ಯ ಮನುಷ್ಯನ ನಿತ್ಯ ಜೀವನದ ಬಳಕೆಗೆ ಅತ್ಯಾವಶ್ಯಕವಾದ ವಸ್ತುಗಳು ; ಅವುಗಳ ಮೇಲೆಯೂ ಕೂಡ ತೆರಿಗೆಯನ್ನು ವಿಧಿಸಿದ್ದಾರೆ. ಅದಕ್ಕೋಸ್ಕರವಾಗಿ ನಾವು ನಮ್ಮ ಭಿನ್ನಾಭಿಪ್ರಾಯವನ್ನು ಈ ಮೂಲಕ ವ್ಯಕ್ತಪಡಿಸುತ್ತಿದ್ದೇವೆಂದು ಅವರು ಹೇಳಿದರು. ಸ್ವಾಮಿ, ಒಂದು ಮೂಲಭೂತವಾದ ಆಶಯವನ್ನು ಏನು ವ್ಯಕ್ತಪಡಿಸಿದರು, ಆ ಆಶಯವನ್ನು ಗಮನದಲ್ಲಿಟ್ಟುಕೊಂಡು, ಇದರಲ್ಲಿ ತಂದಿರತಕ್ಕ ಪದಾರ್ಥಗಳಿವೆಯೋ ಎಂದು ಪರಿಶೀಲನೆಮಾಡಿ ನೋಡಿದರೆ ಅದರಲ್ಲಿ ನನಗನ್ನಿಸುತ್ತದೆ, ಅವರು ಏನು ಒಂದು ತತ್ವದ ಹೆಸರನ್ನು, ಪ್ರತಿಪಾದನೆಯ ನಿಲುವನ್ನು ಮಾಡಿದರೋ ಅದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿ ಪ್ರಭಾವಗಳಿಗೊಳಗಾಗಿ ಅವರು ಕೆಲವು ವಸ್ತುಗಳನ್ನು ಈ ಷೆಡ್ಯೂಲಿನಲ್ಲಿ ತಂದಿರುವುದು ಸ್ವಯಂ ವೇದ್ಯವಾಗುತ್ತದೆ. ಅವುಗಳನ್ನು ನಾನು ಓದುತ್ತೇನೆ. Cigars and Cigarettes—ಇವು ಅತ್ಯಾವಶ್ಯಕವಾದ ವಸ್ತುಗಳು ಇವುಗಳ ಮೇಲೆ ತೆರಿಗೆಯನ್ನು ವಿಧಿಸಬಾರದೆಂದು ಹೇಳಿದ್ದಾರೆ. ಇವು ಸಾಮಾನ್ಯ ಮನುಷ್ಯನ ನಿತ್ಯ ಜೀವನದ ಬಳಕೆಗೆ ಎಷ್ಟುಮಟ್ಟಿಗೆ ಬೇಕು, ಇದು ತತ್ವಶಃ ಎಷ್ಟುಮಟ್ಟಿಗೆ ಬದ್ಧವಾಗಿದೆ, ಇವುಗಳಿಗೆ ತೆರಿಗೆಯಿಂದ ವಿನಾಯಿತಿಯನ್ನು ಕೊಡಬೇಕೇ ಬೇಡವೇ ಎನ್ನುವ ವಿಷಯದಲ್ಲಿ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ. ಸಾಮಾನ್ಯ ಜನರು ಇದನ್ನು ಏನಾದರೂ ಒಂದು ಪ್ರಭಾವದಿಂದ ತಂದಿದ್ದಾರೆಯೇ ಅಥವಾ ಒಂದು ತತ್ವದ ಆಧಾರದ ಮೇಲೆ ತಂದಿದ್ದಾರೆಯೇ ಎಂದು ಪರಿಶೀಲನೆ ಮಾಡುವುದಕ್ಕೆ ಅವರುಗಳಿಗೇ ಬಿಡುತ್ತಿದ್ದೇನೆ. ಹಾಗೆಯೇ "Beedies, snuff, chewing tobacco or any other product manufactured from tobacco" ಇವೂ ಸಹ ನಮ್ಮ ಸ್ನೇಹಿತರುಗಳ ದೃಷ್ಟಿಯಲ್ಲಿ ಸಾಮಾನ್ಯ ಮನುಷ್ಯನಿಗೆ ನಿತ್ಯಜೀವನದಲ್ಲಿ ಬಳಕೆಗೆ ಬೇಕಾದಂಥ ವಸ್ತುಗಳು. ಇವಕ್ಕೂ ಸಹ ತೆರಿಗೆಯ ವಿನಾಯಿತಿಯನ್ನು ಮಾಡಬೇಕೆಂದು ನಮೂದು ಮಾಡಿದ್ದಾರೆ. ಅದರ ವಿಷಯದಲ್ಲಿ ನಮ್ಮ ಸ್ನೇಹಿತರು ಯೋಚನೆ ಮಾಡಬೇಕು, ಸಾರ್ವಜನಿಕರೂ ಯೋಚನೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇನ್ನೂ ಕೆಲವು ಪದಾರ್ಥಗಳನ್ನು ಹೇಳಿದ್ದಾರೆ. ಅವುಗಳನ್ನೆಲ್ಲ ವಿವರಿಸುವುದಕ್ಕೆ ಹೋಗದೆ ಇನ್ನೊಂದು ಅಂಶವನ್ನು ಮಾತ್ರ ತಿಳಿಸಿ ನಾನು ನನ್ನ ಮಾತನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಸ್ನೇಹಿತರು ಈ ಮಸೂದೆಯ ಬಗ್ಗೆ ಮಾತನಾಡುತ್ತ "ನಾನು ಎಲ್ಲೋ ಪ್ರವಾಸ ಹೊರಟಿದ್ದೆ. ಅಲ್ಲಿ ಜನಗಳು ಮಹಮದ್ ಬಿನ್ ತೊಗಲಕನ ಕಾಲದಲ್ಲಿ ತೆರಿಗೆಯನ್ನು ಹಾಕುವಂತೆ ಹಾಕುತ್ತಿದ್ದಾರಲ್ಲ, ಆ ರೀತಿಯ ತೆರಿಗೆಯನ್ನು ಈಗಿನ ಸರ್ಕಾರದವರೂ ತಂದಿದ್ದಾರೆ. ಈ ಹಾಳು ದೇಶದಲ್ಲಿ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದೆ ಇರತಕ್ಕ ಕ್ರಮದಲ್ಲಿ ಈ ಮಾರಾಟ ತೆರಿಗೆಯನ್ನು ಹಾಕಲು ವಿಧಾನಸಭೆಗಳೂ, ಈ ಸರ್ಕಾರದವರೂ ಪ್ರಯತ್ನ ಮಾಡುತ್ತಿದ್ದಾರೆ. ನಾನು ಇದನ್ನು ವಿರೋಧ ಮಾಡುತ್ತೇನೆ" ಎಂದು ಹೇಳಿಕೊಂಡು ಹೊರಟಂಥ ಸ್ನೇಹಿತರು ಈ ಸರ್ಕಾರದವರೂ ಈ ಒಂದು ಚುನಾಯಿತ ಸಮಿತಿಯ ಸದಸ್ಯರೂ ತಂದಿರತಕ್ಕ ಷೆಡ್ಯೂಲ್ ಏನಿದೆ, ತೆರಿಗೆಯ ಕ್ರಮವನ್ನೇನು ಕೊಟ್ಟಿದ್ದಾರೆ, ಅದರಲ್ಲಿ ಅನೇಕ ಬಾಬುಗಳ ಮೇಲೆ ಇನ್ನೂ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕು ಎಂದು ಹೇಳಿದರು. ನಮ್ಮ ಸ್ನೇಹಿತರು ಹೇಳುತ್ತಿದ್ದರು, ಮಹಮ್ಮದ್ ಬಿನ್ ತೊಗಲಕನ ಕಾಲದಲ್ಲಿ ಸಹ ಇಂಥ ತೆರಿಗೆಯನ್ನು ಹಾಕುತ್ತಿರಲಿಲ್ಲ, ದೇಶದಲ್ಲಿ ಎಲ್ಲಿಯೂ ಇಂಥ ತೆರಿಗೆಯ ಕ್ರಮವನ್ನನುಸರಿಸುವುದು ನನಗೆ ಗೊತ್ತಿಲ್ಲವೆಂದು. ಆದರೆ ಅವರು ಮುಂದುವರಿದು ಇವರು ತಂದಿರತಕ್ಕ ಮಸೂದೆಯ ಪ್ರಕಾರ ಅನೇಕ ಬಾಬುಗಳ ಮೇಲೆ ಹಾಕಿರುವ ತೆರಿಗೆ ಬಹಳ ಕಡಮೆ, ಇನ್ನೂ ಜಾಸ್ತಿ ಮಾಡಬೇಕು ಎಂದು ಅನೇಕ ಪದಾರ್ಥಗಳ ಹೆಸರುಗಳನ್ನು ಹೇಳಿದ್ದಾರೆ. ಅದು ರಿಕಾರ್ಡಿನಲ್ಲಿದೆ. ಮಧ್ಯದಲ್ಲಿ ನಾವು ಎಲ್ಲ ವಿಷಯಗಳನ್ನೂ ಳಿದ್ದು

ಕೊಂಡಿದ್ದೇವೆ, ಎಲ್ಲ ಪ್ರಾಂತಗಳಲ್ಲಿರುವ ತೆರಿಗೆಯ ಮಸೂದೆಗಳಲ್ಲಿರುವ ವಿಷಯುವನ್ನೂ ತಿಳಿದುಕೊಂಡಿದ್ದೇವೆ. ಕಾನೂನುಗಳೇನೇನಿವೆ ಎಂದು ತಿಳಿದುಕೊಂಡಿದ್ದೇವೆಂದು ಹೇಳಿದರು. ಸಂತೋಷ. ನಾನು ಅವರ ತಿಳಿವಳಿಕೆಯನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅದೇ ಸ್ನೇಹಿತರು ಸ್ವಲ್ಪ ಮುಂದುವರಿದು ಅದಕ್ಕೇನು ಮಾಡಿದ್ದೀರಿ, ಇದಕ್ಕೇನು ಮಾಡಿದ್ದೀರಿ, ಹೊರಪ್ರಾಂತದಲ್ಲಿ ಹೀಗಿದೆ ಎಂದು ಪ್ರಶ್ನೆ ಮಾಡಿದ್ದನ್ನು ಯಾರೂ ಮರೆಯುಂತಿಲ್ಲವೆಂದು ಕಾಣುತ್ತದೆ. ಅವರು ಬುದ್ಧಿವಂತರು, ಎಲ್ಲ ವಿಷಯವನ್ನೂ ತಿಳಿದುಕೊಂಡಿದ್ದಾರೆ.

ಆದರೆ ಈ ಶಾಸನ ಸಭೆಯಲ್ಲೇ ಅನೇಕ ಕಾರ್ಯಕಲಾಪಗಳನ್ನು ನಡೆಸುತ್ತಿರುವಾಗ ಮಾನ್ಯ ಸ್ಪೀಕರವರು ಹೇಳಿದಂತೆ ಒಂದು ರೀತಿಯಾಗಿ ಸ್ಪೋರ್ಟಿಗ್ ರೀತಿಯಾಗಿ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಏಕಾಏಕಿ ಅನೇಕ ಸಂದರ್ಭಗಳಲ್ಲಿ ಕೋಪಮಾಡಿಕೊಂಡು, ಮುನಿಸಿಕೊಂಡು, ಸಭೆಯನ್ನು ಬಿಟ್ಟುಹೋಗುತ್ತೇನೆಂದು ಹೇಳಿ ಹೋಗುವುದು, ಇವೆಲ್ಲ ಶಾಸನ ಸಭೆಯ ಗೌರವಕ್ಕೆ ಸರಿಯಾದುದಲ್ಲ. ನಾವುಗಳು ಎಲ್ಲರೂ ಸ್ನೇಹಿತರಾಗಿ ಬಂದು ದೇಶದ ದೃಷ್ಟಿಯಿಂದ ಸೂಕ್ತವಾದ ಕಾನೂನುಗಳನ್ನು ಮಾಡಿ ಆಡಳಿತವನ್ನು ನಡೆಸುವುದಕ್ಕೆ ಸಹಾಯ ಮಾಡುವದಕ್ಕಾಗಿ ಬಂದಿರತಕ್ಕದ್ದು.

Dr. T. PARTHASARATHY.—Is the Hon'ble Member speaking on the Bill or is he rendering advice to another Hon'ble Member?

Mr. DEPUTY SPEAKER.—He is speaking on matters relating to the Bill.

Dr. T. PARTHASARATHY.—He is particularly speaking on the member who previously spoke,

Mr. DEPUTY SPEAKER.—It is a casual remark.

Sri A. V. NARASIMHA REDDY.—I do not indulge in the manner in which my Hon'ble friend indulges at times. I have been so mild and courteous. At least I hope he will not interrupt me when I speak such mild words. ನಾನು ಹೇಳುವುದು, ಒಂದು ಕಾನೂನನ್ನು ಮಾಡುವಾಗ ಅಥವಾ ಒಂದು ಕಾರ್ಯಕಲಾಪವನ್ನು ಈ ಸಭೆಯಲ್ಲಿ ನಡೆಸುವಾಗ ಒಂದು ಘನವಾದ ಉದ್ದೇಶದಿಂದ ಎಲ್ಲರೂ ಇಲ್ಲಿ ಸೇರಿದ್ದೇವೆ. ಆ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸಗಳನ್ನು ನಡೆಸುವುದಾದರೆ ವಿರಸವಾಗಲಿ, ಮುನಿಸಿಕೊಳ್ಳುವುದಾಗಲಿ ಬರುವುದಿಲ್ಲವೆಂದು ನನ್ನ ಮಿತ್ರರುಗಳು ತಿಳಿದುಕೊಳ್ಳಬೇಕು. ಇಷ್ಟನ್ನು ಮಾತ್ರ ಹೇಳಿ ನಾನು ನನ್ನ ಸಂಪೂರ್ಣ ಬೆಂಬಲವನ್ನು ಈ ಬಿಲ್ಲಿಗೆ ಕೊಟ್ಟು ಅದೇರೀತಿಯಾಗಿ ನನ್ನ ಎಲ್ಲ ಸ್ನೇಹಿತರುಗಳೂ ಇದಕ್ಕೆ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Dr. T. PARTHASARATHY.—On a point of clarification. The Hon'ble Member never got up when he made a remark. Therefore I said the manners of the House should be learnt by him.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ನಾನು ವೈಯುಕ್ತಿಕವಾಗಿ ಹೇಳಬೇಕಾಗಿದೆ. ಈ ಕಚ್ಚಾಟ, ಒಬ್ಬರಿಗೊಬ್ಬರಲ್ಲಿ ತಪ್ಪು ಹುಡುಕುವುದು, ಇದು ಈ ಸಭೆಯ ಘನತೆ ಗೌರವಕ್ಕೆ ಸ್ವಲ್ಪ ಕುಂದಕ ತರುತ್ತದೆ ಎಂದು ನಾನು ತಿಳಿದುಕೊಂಡು ನನ್ನ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

ಹಿಂದೆ ಆಗಲೇ ಈ ಮಸೂದೆ ಚರ್ಚೆಗೆ ಬಂದಾಗ ಇದನ್ನು ಪರಿಶೀಲನೆಮಾಡಿ ಇದರಲ್ಲಿ ಅನೇಕ ಲೋಪದೋಷಗಳಿವೆ, ಇದನ್ನು ಒಂದು ಪರಿಶೀಲನಾ ಸಮಿತಿಗೆ ಕಳುಹಿಸಬೇಕೆಂದು ಕಳುಹಿಸಿದ್ದಾಯಿತು. ಈ ಮಸೂದೆ ಪರಿಶೀಲನೆಯಾಗಿ ಈಗ ನಮ್ಮ ಒಪ್ಪಿಗೆಗಾಗಿ ಬಂದಿದೆ. ಈ ಸಮಿತಿಯಲ್ಲಿದ್ದ ನನ್ನ ಮಿತ್ರರೂ ಮತ್ತು ನನ್ನ ಕಾಂಗ್ರೆಸ್ಸಿನ ಮಿತ್ರರೂ ಎಲ್ಲರೂ ಸೇರಿ ಅನೇಕ ತಿದ್ದುಪಾಟುಗಳನ್ನು, ಸಲಹೆಗಳನ್ನು ಸೂಚನೆಮಾಡಿದ್ದರು. ಆ ತಿದ್ದುಪಡಿಗಳೂ ಕೂಡ ಇಲ್ಲಿ ನಮಗೆ ಒಂದು ಪುಸ್ತಕದ ರೂಪದಲ್ಲಿ ನಮ್ಮ ಮುಂದೆ ಬಂದಿದೆ.

ಉಪಾಧ್ಯಕ್ಷರು.—ತಾವು ರಿಪೋರ್ಟಿನ ಮೇಲೆ ಮಾತನಾಡುತ್ತಿದ್ದೀರೋ ಅಥವಾ ಬಿಲ್ಲಿನ ಮೇಲೆಯೋ?

ಶ್ರೀ ವೈ. ವೀರಪ್ಪ.—ಪೀಠಿಕೆಯಾಗಿ ಹೇಳುತ್ತಿದ್ದೇನೆ. ಸಾಮಾನ್ಯವಾಗಿ 1947ರಿಂದ 1957 ರ ವರೆಗೆ ಈ ಕಾಂಗ್ರೆಸ್ ಸರಕಾರದವರು ಯಾವ ಮಟ್ಟದಲ್ಲಿ ಸರಕಾರ ನಡೆಸುತ್ತಿದ್ದಾರೆ ಎಂಬ ಅಂಶವನ್ನು ಕೊಂಚ ಈ ಸಂದರ್ಭದಲ್ಲಿ ನೋಡಬೇಕಾಗಿದೆ. ಅನೇಕ ರೀತಿಯ ತೆರಿಗೆ, ಅನೇಕ ರೀತಿಯ ಸುಂಕಗಳನ್ನು ಹೇರಲು ಅನೇಕ ವಿಧವಾದ ಮಸೂದೆಗಳನ್ನು ತರುತ್ತಿರುವುದನ್ನು ನೋಡಿದರೆ ಬಹುಶಃ ಅವರಿಗೆ ಒಂದು ಹಣದ ಅಭಾವ ಬಂದಿದೆ. ಅದಕ್ಕೋಸ್ಕರವಾಗಿ ಅವರಿಗೆ ಬೇರಾವ ಮಾರ್ಗಗಳೂ ತೋರದೆ ಈ ರೀತಿಯಾಗಿ ಸುಂಕಗಳನ್ನು ಹೇರುತ್ತಿದ್ದಾರೆ ಎಂದು ಭಾಸವಾಗುತ್ತದೆ. ಸ್ವಾಮೀ, ಮೊದಲನೆ ಪಂಚವಾರ್ಷಿಕ ಯೋಜನೆ ಮುಗಿದು ಎರಡನೆ ಪಂಚವಾರ್ಷಿಕ ಯೋಜನೆ ನಡೆಯುತ್ತಿದೆ. ನೀವು ಖರ್ಚು ಮಾಡುವ ಹಣವನ್ನು ದಕ್ಷತೆಯಿಂದ ಖರ್ಚು ಮಾಡುತ್ತಿಲ್ಲ. ಯಾವ ಮನುಷ್ಯನ ವರಮಾನವನ್ನಾದರೂ ಪರಿಶೀಲನೆ ಮಾಡಿದರೆ ಅದರಲ್ಲಿ ವ್ಯಯವೇ ಹೆಚ್ಚಾಗಿ ಕಣ್ಣಿಗೆ ಕಾಣಿಸುತ್ತಿದೆ.

ನಿಜವಾಗಿಯೂ ನೋಡಿದರೆ, ತೆರಿಗೆಯನ್ನು ಜನರ ಮೇಲೆ ಹೇರುವ ಒಂದು ದಾರಿಯನ್ನು ಹುಡುಕಿ ಜನರಿಂದ ತೆರಿಗೆಯನ್ನು ವಸೂಲುಮಾಡಿ ದೇಶದಲ್ಲಿಯ ನಾನಾ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕಾಗಿದೆ. ತೆರಿಗೆಯನ್ನು ಹೇರುವ ದಾರಿ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬ ವಿಷಯವನ್ನು ಪರಿಶೀಲನೆ ಮಾಡಿದರೆ ಖಂಡಿತವಾಗಿಯೂ ಜನರಿಗೆ ಅನುಕೂಲವಾಗಿಲ್ಲ ಎನ್ನುವುದು ಎದ್ದು ಕಾಣುತ್ತದೆ. ಇದಕ್ಕೆಲ್ಲ ಏನೋ ಒಂದು ಮುಖ್ಯವಾದ ಕಾರಣವಿದೆ. ಇವೊತ್ತಿನ ದಿವಸ ಆಡಳಿತದಲ್ಲಿ ದಕ್ಷತೆಯಿಲ್ಲ ಮತ್ತು planned economy ಇಲ್ಲ. ಆಡಳಿತದಲ್ಲೆಲ್ಲ ದುಂದುಗಾರಿಕೆಯೇ ಜಾಸ್ತಿಯಾಗಿದೆ. ಶಾಸನ ಸಭೆಗಳಿಗೆ ಐದು ವರ್ಷಕ್ಕೊಮ್ಮೆ ಚುನಾವಣೆಯಾಗುತ್ತದೆ. ಅದರಂತೆ ಈ ವರ್ಷ ಚುನಾವಣೆಗಳಾಗಿ, ಕೆಲವರು ವಿರೋಧ ಪಕ್ಷದಲ್ಲಿಯೂ ಮಿಕ್ಕವರು ಆಡಳಿತ ಪಕ್ಷದಲ್ಲಿಯೂ ಚುನಾಯಿತರಾಗಿ ಬಂದಿದ್ದಾರೆ. ವಿರೋಧ ಪಕ್ಷದವರು ವಿರೋಧವಾಗಿ ಮಾತನಾಡುತ್ತಾರೆಂದು ಹೇಳುತ್ತಾರೆ. ಆದರೆ ವಿರೋಧ ಪಕ್ಷದವರು ನಿಜವಾಗಿಯೂ ರಚನಾತ್ಮಕವಾದ ಸಲಹೆಗಳನ್ನೇ ಜನರ ಅನುಕೂಲಕ್ಕಾಗಿ ಮಾಡುತ್ತಾರೆ.

(ಶ್ರೀ ವೈ. ವೀರಪ್ಪ)

ಸರಕಾರದ ಆಡಳಿತವನ್ನು ನಡೆಸತಕ್ಕ ಜವಾಬ್ದಾರಿಯು ಅಧಿಕಾರದಲ್ಲಿರುವ ಪಾರ್ಟಿಗಿರುತ್ತದೆ. ನಾವು ಅವರೊಡನೆ ಸಹಕರಿಸಿ ಅವರಿಗೆ ಆಡಳಿತ ನಡೆಸಲು ಬೇಕಾದ ಹಣ ಒದಗಿಸುವುದು ನಮ್ಮ ಕರ್ತವ್ಯ. ಅವರು ಆಡಳಿತ ಪ್ರಾರಂಭಿಸಿ ಹತ್ತು ವರ್ಷಗಳು ಕಳೆದು ಹೋದವು. ಮೊದಲನೆ ಪಾಂಚವಾರ್ಷಿಕ ಯೋಜನೆಯೂ ಮುಗಿಯಿತು. ಆದರೂ ಜನಸಾಮಾನ್ಯರ ಮುಖ್ಯವಾಗಿ ರೈತರ, ಕೂಲಿಗಾರರ ಮತ್ತು ಸಾಮಾನ್ಯ ಮಟ್ಟದಲ್ಲಿರುವ ಜನಗಳ ಸ್ಥಿತಿ ಪ್ರಗತಿದಾಯಕವಾಗಿ ಬೆಳೆದಿದೆಯೇ ಎಂದು ನೋಡಿದರೆ, ಖಂಡಿತವಾಗಿಯೂ ಬೆಳೆದಿಲ್ಲವೆಂದು ನಾನು ಹೇಳುತ್ತೇನೆ. ದುಡ್ಡು ಕೊಡೋಣ. ಅರ್ಥಸಚಿವರು ಕೇಳುತ್ತಾರೆ; ಕೊಡೋಣ. ನಾವು ಹೀಗೆ ಹಿಂದೆ ಕೊಟ್ಟಿದ್ದನ್ನೆಲ್ಲ ಉಗಯೋಗಿಸಿ ಏನು ಫಲ ದೊರಕಿಸಿ ಕೊಟ್ಟಿದ್ದೀರಿ ಎನ್ನುವುದನ್ನು ನೀವೇ ಹೇಳಿ. ಏನೋ ಒಂದು ಕಣ್ಣಿಗೆ ಪ್ರಗತಿ ಕಾಣದಿರಬಹುದು ಎನ್ನುವಂತಹ ವಾದ ಮಾಡಬಹುದು. ಹೀಗೆ ಪ್ರಗತಿ ಆಗದೆ ಇರಲು ಕಾರಣ ಏನು ಎನ್ನುವುದನ್ನು ನಾವು ನೋಡಿದರೆ ಆಡಳಿತದ ದಕ್ಷತೆ ಕಡಮೆಯಾಗಿ ಅಲ್ಲಲ್ಲೇ ಗುಂಪು ಒಳಪಂಗಡಗಳಾಗಿ ಅಸೂಯೆಯೇ ಜಾಸ್ತಿಯಾಗಿ ಆಡಳಿತದ ಖರ್ಚು ಹೆಚ್ಚುತ್ತಿರುವುದು. ಆ ಖರ್ಚಿಗೆ ಸರಿಯಾಗಿ ಜನಗಳಿಗೆ ಫಲ ದೊರಕುತ್ತಿಲ್ಲ. ಹಣವನ್ನು ಶೇಖರಣೆ ಮಾಡಿಕೊಡೋಣ. ನಮ್ಮ ಕೂಲಿಗಾರರಿಗೆ ಎಷ್ಟರಮಟ್ಟಿಗೆ ಸರಕಾರದಿಂದ ಇವೊತ್ತಿನ ದಿವಸ ಅನುಕೂಲವಾಗುತ್ತಿದೆ ಎನ್ನುವುದನ್ನು ನೋಡೋಣ. ಸುಮ್ಮನೆ ಮಾತನಾಡಬೇಕು ಎಂದು ಹೇಳುತ್ತಿಲ್ಲ. ನಿಜವಾದ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ನೋಡಿ. ಈಗ ಆಹಾರದ ಪರಿಸ್ಥಿತಿ ಹೇಗಿದೆ ಎಂದರೆ, ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೂ ಸಹ ನಮಗೆ ಸಾಕಾದಷ್ಟು ಆಹಾರವನ್ನು ಬೆಳೆಯಲು ಸಾಧ್ಯವಾಗಿಲ್ಲ. ಮಾನ್ಯ ಮಿತ್ರರೇನೋ ಮಹಮ್ಮದ್‌ಬಿನ್ ತೊಗಲಕ್ಕನ ರಾಜ್ಯವಾಗಿದೆ ಎಂದು ಹೇಳಿದರು. ಹೀಗೆ ಆಗುತ್ತಿದ್ದರೆ ಮಹಮ್ಮದ್‌ಬಿನ್ ತೊಗಲಕ್ಕನ ರಾಜ್ಯವೆಂದೇ ಹೇಳಬೇಕಾಗಿದೆ. ದುಂದುಗಾರಿಕೆಯೇ ಹೆಚ್ಚಾಗಿ ಕಡ್ಡಾಯವಾದ ಕಾನೂನುಗಳನ್ನು ಮಾಡಿರುವುದರಿಂದ ಜನಗಳಿಗೆ ತೊಂದರೆ ಹೆಚ್ಚಾಗುತ್ತಿದೆ.

ಶ್ರೀ ಟಿ. ಮರಿಯಪ್ಪ.—ಸ್ವಾಮೀ, ಹೀಗೆ ಜನರಲ್ ಆಗಿ ಮಾತನಾಡುವುದು ಸರಿಯಲ್ಲ. ಈಗ Select committee report ನಮ್ಮ ಮುಂದೆ ಇದೆ. ಅದರ ಮೇಲೆ ಮಾತ್ರ ಮಾತನಾಡಬೇಕು.

ಶ್ರೀ ವೈ. ವೀರಪ್ಪ.—ನಾನು yield ಆಗುವುದಿಲ್ಲ. ತಾವು ಏನು ಹೇಳಿದಿರೋ ಅದಕ್ಕೆ ಮುಂದೆ ಉತ್ತರ ಕೊಡುತ್ತೇನೆ.

ಒಂದು ತೆರಿಗೆಯನ್ನು ಹಾಕುವಾಗ ಜನರು ಎಷ್ಟು ಮಟ್ಟಿಗೆ ಕೊಡಬಲ್ಲರು ಮತ್ತು ಅದನ್ನು ಯಾರ ಮೇಲೆ ಹಾಕಬೇಕು ಎನ್ನುವ ಅಂಶವನ್ನು ಪರಿಶೀಲನೆ ಮಾಡುವುದು ಸರ್ಕಾರದ ಮುಖ್ಯ ಕರ್ತವ್ಯ. ಅನೇಕ ಮಾನ್ಯ ಮಿತ್ರರು ಹೇಳುತ್ತ ನಮ್ಮ ಸಮಾಜದ ಆರ್ಥಿಕ ಪರಿಸ್ಥಿತಿತೃಪ್ತಿಕರವಾಗಿಲ್ಲ ಅದರಿಂದಾಗಿ ಅನೇಕಾನೇಕ ಅನ್ಯಾಯಗಳು ಆಗುತ್ತಿವೆ ಎಂದರು. ನಮ್ಮ ಜನಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವುದು, ಆಹಾರ, ವಸತಿ, ಬಟ್ಟೆ, ವಿದ್ಯಾಭ್ಯಾಸ ಮತ್ತು ವೈದ್ಯ ಸಹಾಯ ಅವು ಯಾವವೂ ಕೂಡ ಸರಿಯಾಗಿ ಸಿಕ್ಕುತ್ತಿಲ್ಲ. ರಾಜ್ಯಾಂಗದಲ್ಲಿ ಈ ವಿಚಾರವಾಗಿ ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದಾರೆ. ರಾಜ್ಯಾಂಗದ 46ನೆಯ ಆರ್ಟಿಕಲ್ ಪ್ರಕಾರ 14 ವರ್ಷದೊಳಗಿರುವವರಿಗೆಲ್ಲ ಕಡ್ಡಾಯವಾದ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದಿದೆ. ಆ ರೀತಿ ಇದುವರೆಗೂ ಮಾಡುವುದಕ್ಕಾಗಲಿಲ್ಲ. ಈಗ ನಮಗೆ ನಾಲ್ಕು ಪ್ರಾಂತಗಳ ಭಾಗಗಳು ಬಂದು ಸೇರಿವೆ. ಒಂದೊಂದು ಪ್ರಾಂತದಲ್ಲಿ ಒಂದೊಂದು ರೀತಿಯಾದ ತೆರಿಗೆಗಳಿರುವುದು ಯೋಗ್ಯವಲ್ಲ ಎನ್ನುವ ದೃಷ್ಟಿಯಿಂದ ಈ ಮಸೂಧೆಯನ್ನು ತಂದಿದ್ದಾರೆ ಎಂದು ಹೇಳುತ್ತಾರೆ. ಹಾಗೆ ಮಾಡುವುದು ಮುಖ್ಯವಾಗಿ ಸಾಮಾನ್ಯ ಮನುಷ್ಯನಿಗೆ ತೊಂದರೆ ಯಾಗಿದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. Taxation ಸಲಹೆಗಳಲ್ಲಿ ಒಂದು ಸೂಚನೆ ಕೊಟ್ಟಿದ್ದಾರೆ. Taxation Committee ಯವರು ಈ ತೆರಿಗೆ ಸುಂಕದ ವಿಧಾಯಕವಾಗಿ ಕೆಲವು ಅಂಶಗಳನ್ನು ಹೇಳಿದ್ದಾರೆ. ಈ ಮಸೂದೆಯ 37ನೆಯ ಪೇಜಿನಲ್ಲಿ ನೋಡಿದರೆ, 'exemptions have been limited in the Light of the recommendations of the Taxation Enquiry Commission to a few articles essential for the life of the community' ಎಂದು ಹೇಳಿದ್ದಾರೆ ಅಂದರೆ ಮೊದಲು ಮೂರಿದ್ದ ಷೆಡ್ಯೂಲು ಈಗ ಐದು ಆಗಿವೆ. ಐದನೇ ಷೆಡ್ಯೂಲನ್ನು ನೋಡಿದರೆ ಅದರಲ್ಲಿ ಟಾಡಿ ಅಥವಾ ಹೆಂಡವನ್ನು ಎಗ್ಜೆಮ್ಟ್ ಮಾಡಿದ್ದಾರೆ. ಇದು ತತ್ವಶಃ ಸರ್ಕಾರದ ಒಂದು ಪಾಲಿಸಿಗೆ ವಿರೋಧವಾಗಿದೆ. ಈಗ ಇದಕ್ಕೆ ಸರ್ಕಾರದವರು ಉತ್ತೇಜನ ಕೊಡುತ್ತಿದ್ದಾರೆಂದು ನಾನು ಹೇಳಬೇಕಾಗಿದೆ. ಕೆಲವು ಮಾದಕ ವಸ್ತುಗಳಿಗೆ ಎಗ್ಜೆಂಪ್ಷನ್ ಕೊಡಲಿಲ್ಲ. ಟಾಡಿ ಕುಡಿಯುವವರು ಹೆಚ್ಚಿಗೆ ಕೂಲಿಗಾರರು ಮತ್ತು ಬಡವರು ಎಂದು ಮಾನ್ಯ ಮಿತ್ರರು ಹೇಳಿದರು. ಇದನ್ನು ನಿರ್ಮೂಲಮಾಡಬೇಕೆಂಬ ಧ್ಯೇಯ ಇರಬೇಕಾದರೆ, ಟಾಡಿಯನ್ನು ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಅದರ ಬೆಲೆ ಕಡಮೆಯಾಗಿ ಕುಡಿಯುವವರು ಜಾಸ್ತಿಯಾಗುತ್ತಾರೆ. ಇದು ಸರ್ಕಾರದ ತತ್ವಕ್ಕೆ ವಿರೋಧವೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಈಗ ಟಾಡಿ ಮಾತ್ರ ಎಗ್ಜೆಮ್ಟ್ ಆಗಿದೆ. ಹಿಂದೆ ಫಾರಿನ್ ಲಿಕ್ಕರ್ ಎಗ್ಜೆಮ್ಟ್ ಆಗಿತ್ತು. ಹಿಂದೆ ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್ಸಿಗೂ ಟ್ಯಾಕ್ಸ್ ವಿನಾಯತಿ ಆಗಿತ್ತು. ಆಂಧ್ರದಲ್ಲಿ ಟಾಡಿ ಎಗ್ಜೆಮ್ಟ್ ಮಾಡಿದ್ದಾರೆ. ನಾವು ಎಗ್ಜೆಮ್ಟ್ ಮಾಡದಿದ್ದರೆ ಅಲ್ಲಿಂದ ಟಾಡಿ ಸ್ಮಗಲ್ ಆಗುತ್ತದೆ. ಹತ್ತಿರದಲ್ಲಿ ಹಿಂದೂಪುರವಿದೆ, ಹೈದರಾಬಾದ್ ಏರಿಯಾ ಪಕ್ಕದಲ್ಲಿದೆ. ಕಂಟ್ರಿ ಲಿಕ್ಕರಿಗೆ ಇದವರೆಗೂ ಟ್ಯಾಕ್ಸ್ ಇರಲಿಲ್ಲ. ಮೈಸೂರಿನಲ್ಲಿ ಎಗ್ಜೆಮ್ಷನ್ ಇತ್ತು. ಫಾರಿನ್ ಲಿಕ್ಕರಿಗೆ ಈಗ ಶೇಕಡ 25ರಷ್ಟು ತೆರಿಗೆ ಇದೆ. ಕಂಟ್ರಿ ಲಿಕ್ಕರಿಗೆ ಶೇಕಡ ಮೂರರಷ್ಟು ತೆರಿಗೆ ಹಾಕಿದೆ.

ಶ್ರೀ ಕೆ. ಕೆಂಚಪ್ಪ.—ಎಲ್ಲೆಲ್ಲಿಂದ ಸ್ಮಾಗಲ್ ಆಗುತ್ತದೆ? What is your opinion from the point of view of the consumer?

ಶ್ರೀ ಟಿ. ಮರಿಯಪ್ಪ.—ಕನ್ಸ್ಯೂಮರ್ಸ್ ಕೈ ಬಿಡುವುದಿಲ್ಲ. ಟಾಡಿಗೂ ಶೇಕಡ ಮೂರರಷ್ಟು ತೆರಿಗೆ ಹಾಕಬೇಕೆಂದರೆ ನನ್ನ ಅಭ್ಯಂತರವಿಲ್ಲ; if the House agrees for that, I have no objection; but the question is once you tax toddy it may be smuggled.

ಶ್ರೀ ವೈ. ವೀರಪ್ಪ.—ನಾನು ಅದಕ್ಕೆ ಒಂದು ಔಷಧಿ ಹೇಳುತ್ತೇನೆ. ಟಾಡಿಯನ್ನು ಟ್ಯಾಪ್ ಮಾಡಬೇಡಿ. ನಾನು ಸರ್ಕಾರದ ನೀತಿಯ ಮೇಲೆ ಹೇಳುತ್ತೇನೆ. ಪಕ್ಕದ ಸ್ಟೇಟಿನಲ್ಲಿ ಏನು ಪಾಲಿಸಿಯನ್ನು ಅನುಸರಿಸುತ್ತಿದ್ದಾರೋ ಅದನ್ನು ನೀವು ಇಲ್ಲಿಯೂ ಅನುಸರಿಸುತ್ತಿದ್ದೀರಿ ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಯಾಕೆಂದರೆ 1953ರಲ್ಲಿ ಅಗರವಾಲಾ ಕಮಿಟಿಯವರು ಪಾನನಿರೋಧವನ್ನು ಪರಿಪೂರ್ಣವಾಗಿ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಆದರೆ ನಾವು ಆ ಪಾಲಿಸಿಗೆ ವಿರೋಧವಾಗಿ ಹೋಗುತ್ತಿದ್ದೇವೆ. ಐದನೆಯ ಷೆಡ್ಯೂಲಿನಲ್ಲಿ ಜನ ಸಾಮಾನ್ಯರು ಮುಖ್ಯವಾಗಿ ಉಪಯೋಗಿಸುವ ವಸ್ತುಗಳು ಎಂದರೆ ಆನಿಯನ್ ಮತ್ತು ಗಾರ್ಲಿಕ್--ಈ ವಸ್ತುಗಳ ಮೇಲೆ ವಿನಾಯತಿಯನ್ನು ತೋರಿಸಿಲ್ಲ. ಇವುಗಳನ್ನು ಜನ ಸಾಮಾನ್ಯರು ಮುಖ್ಯವಾಗಿ ಉಪಯೋಗಿಸುವುದಿಲ್ಲವೆಂದು ಯಾರು ಹೇಳುತ್ತಾರೆ? ಇವುಗಳನ್ನು ಮುಖ್ಯವಾಗಿ ಕೂಲಿಗಾರರು, ಬಡವರು ಮತ್ತು ಜನ ಸಾಮಾನ್ಯರು ಬಹಳ ಹೆಚ್ಚಿಗೆ ಉಪಯೋಗಿಸುತ್ತಾರೆ. ಇವುಗಳಿಗೆ ನೀವು ತೆರಿಗೆ ವಿನಾಯಿತಿ ಮಾಡಲಿಲ್ಲ. ಸುಮ್ಮನೆ ಐದನೆಯ ಷೆಡ್ಯೂಲಿನಲ್ಲಿ ಐದನೆಯ ಐಟಂನಲ್ಲಿ "Vegetables (green or dried) other than potatoes, onions, garlic and ginger" ಎಂದು ಹೇಳಿದ್ದೀರಿ. ಇದರಲ್ಲಿ ಸುಮ್ಮನೆ ತರಕಾರಿಗಳಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ಮಾಡಿದ್ದೇವೆಂದು ಹೇಳಿದ್ದೀರಿ ಮುಖ್ಯವಾಗಿ ವಿಶೇಷವಾಗಿ ತಿನ್ನುವ ಪದಾರ್ಥಗಳಾದ ಈರುಳ್ಳಿ, ಬೆಳ್ಳುಳ್ಳಿ ಮೇಲೆ ಮಾರಾಟ ತೆರಿಗೆಯನ್ನು ವಿನಾಯತಿ ಮಾಡದೇ ಇರುವುದು ಸರಿಯಲ್ಲ.

ಶ್ರೀ ಟಿ. ಮರಿಯಪ್ಪ.—ನಿಮ್ಮ ನಾಯಕರೆ ನೋಟ್ ಆಫ್ ಡಿಸೆಂಟಿನಲ್ಲಿ ಆರೀತಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆ ರೀತಿ ಕೊಟ್ಟಿರುವುದರಿಂದ ನೀವು ಹೇಳಲಿಲ್ಲ ಎಂದು ಹೇಳಬೇಡಿ. ಜವಾಬ್ದಾರಿ ನಿಮ್ಮದೂ ಜಾಸ್ತಿ ಇದೆ.

ಶ್ರೀ ವೈ. ವೀರಪ್ಪ.—ಇನ್ನು ಐದನೆಯ ಷೆಡ್ಯೂಲಿನಲ್ಲಿ 24ನೆ ಐಟಂನಲ್ಲಿ "Agricultural implements which are the products of cottage industry, that is to say, any industry carried on by a person at home not being a factory" ಎಂದು ಹೇಳಿದ್ದಾರೆ. ಮುಖ್ಯವಾಗಿ ರೈತರಿಗೆ ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಎಂದರೆ ಕಬ್ಬಿಣದ ಪದಾರ್ಥಗಳು. ಶ್ರೀ ವಿಶ್ವೇಶ್ವರಯ್ಯನವರ ಸ್ಕೀಮಿನಲ್ಲಿ ಕಬ್ಬಿಣದ ನೇಗಿಲು, ಮರಮುಟ್ಟುಗಳು, ಗುಳ ಇತ್ಯಾದಿಗಳನ್ನು ತಯಾರು ಮಾಡುತ್ತಾರೆ; ಆದರೆ ಕಾಟೇಜ್ ಇಂಡಸ್ಟ್ರೀಸಿನಲ್ಲಿ ಕಬ್ಬಿಣದ ಪದಾರ್ಥಗಳನ್ನೇ ಅಷ್ಟಾಗಿ ಮಾಡುವುದಿಲ್ಲ ನಿಜವಾಗಿಯೂ ಅರ್ಥ ಮಾಡಿಕೊಂಡರೆ ಅವುಗಳಿಗೂ ಸೇಲ್ಸ್ ಟ್ಯಾಕ್ಸ್ ಬೀಳುತ್ತದೆ ಎಂದು ಕಾಣುತ್ತದೆ. ಆದ್ದರಿಂದ ಇವುಗಳ ಮೇಲೆ ಬೀಳುವ ಮಾರಾಟ ತೆರಿಗೆಯನ್ನು ರದ್ದುಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಅವುಗಳ ಮೇಲೂ ಈ ತೆರಿಗೆ ಬೀಳುವುದಿಲ್ಲ. I agree, that is to say, any industry carried on by a person at home not being a factory be exempted from sales tax.

ಶ್ರೀ ವೈ. ವೀರಪ್ಪ.—ನಾನು ಸಾಮಾನ್ಯವಾಗಿ ಏನು ತಿಳಿದುಕೊಂಡಿದ್ದೇನೆಂದರೆ, ವ್ಯವಸಾಯದಲ್ಲಿ ಬಳಕೆಯಲ್ಲಿರುವ ಉಪಕರಣಗಳಾದ, ಸಣ್ಣ ಪುಟ್ಟ ಸಾಮಾನುಗಳಿಗೆ, ಎಂದರೆ ಕಬ್ಬಿಣದ ಗುಳ, ಇತ್ಯಾದಿಗಳಿಗೆ, ನೇಗಿಲು, ಮರ ಇವಕ್ಕೆ ಈ ತೆರಿಗೆಯನ್ನು ಹಾಕುತ್ತಾರೆ.

ಶ್ರೀ ಟಿ. ಮರಿಯಪ್ಪ.—ಫ್ಯಾಕ್ಟರಿಯವರು ಮಾತ್ರ ಕೊಡಬೇಕು. ಹೊರಗೆ ಮಾಡಿದರೆ ಇಲ್ಲ. ಫ್ಯಾಕ್ಟರೀಸ್ ಆಕ್ಟ್‌ನಲ್ಲಿ ಏನು ಡೆಫಿನಿಷನ್ ಇದೆ ಎನ್ನುವುದನ್ನು ಅರ್ಥ ಮಾಡಿಕೊಂಡು ನೋಡಿ.

ಶ್ರೀ ವೈ. ವೀರಪ್ಪ.—ಆ ರೀತಿ ಅರ್ಥಬಂದರೆ ನಿಜವಾಗಿ ರೈತನಿಗೆ ಅನುಕೂಲವಾಗುತ್ತದೆ. ಇಂಡಸ್ಟ್ರಿಯಲ್ ಕನ್ಸರ್ನ್ಸ್‌ಗೆ ಎಗ್ಸೆಂಪ್ಷನ್ ಇಲ್ಲವೆಂದು ಅರ್ಥವಾಗುತ್ತದೆ.

ಇನ್ನು ಮೂರನೆಯ ಷೆಡ್ಯೂಲಿಗೆ ಬಂದರೆ ಮಾನ್ಯ ಮಂತ್ರಿಗಳು ಟಾಡಿ ಬಗ್ಗೆ ನಾವು ಹೆಚ್ಚಿಗೆ ವಿನಾಯಿತಿ ತೋರಿಸಿದರೆ ಆಂಧ್ರ ದೇಶದಿಂದ ಸ್ಮಗಲ್ ಆಗುತ್ತದೆ ಎಂದು ಹೇಳಿದರು. ಹಾಗೆ ಹೇಳುವುದೆಂದರೆ ಮೆಣಸಿನ ಕಾಯಿಗೆ ಬೊಂಬಾಯಿನಲ್ಲಿಯೂ ವಿನಾಯಿತಿ ಇದೆ. ಅಕ್ಕ ಪಕ್ಕದ ನೆರೆಹೊರೆ ಪ್ರಾಂತಗಳ ಒಂದು ತತ್ವವನ್ನು ನಾವು ಪರಿಪಾಲಿಸುವುದು ಒಳ್ಳೆಯದು. ಮುಖ್ಯವಾಗಿ ಮೆಣಸಿನಕಾಯಿಯ ಮೇಲೆ ತೆರಿಗೆ ವಿಧಿಸುವ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಅನೇಕ ಸದಸ್ಯರು ಮಾಡಿದ್ದಾರೆ. ಸಾಮಾನ್ಯವಾಗಿ ಮನಸ್ಸು ಮಾಡಿದರೆ, ಇದನ್ನು ಎಗ್ಸೆಂಪ್ಷನ್ ಮಾಡಬಹುದಾಗಿತ್ತು. ಕಾಲ ಮೀರಿಲ್ಲ. ಅದೇನೂ ದೊಡ್ಡದಲ್ಲ. ಈಗಲೂ ಇದನ್ನು ಡಿಲೀಟ್ ಮಾಡಿದರೆ ಒಳ್ಳೆಯದು.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಕಾರ ಒಳ್ಳೆಯದಲ್ಲ.

ಶ್ರೀ ವೈ. ವೀರಪ್ಪ.—ನೀವು ಓಟುದಾರರ ಅಭಿಮತವನ್ನು ಪ್ರತಿಬಿಂಬಿಸುವ ವ್ಯಕ್ತಿಗಳು. ಈ ಪದಾರ್ಥಗಳ ಮೇಲೆ ನೀವು ತೆರಿಗೆ ಹಾಕುತ್ತೀರಿ ಎಂದರೆ, ನಿಮ್ಮ ಕ್ಷೇತ್ರದಲ್ಲಿರುವವರು ಒಪ್ಪುತಾರೆಯೇ? ನಾವು ಮತದಾರರ ಅಭಿಪ್ರಾಯವನ್ನು ಪ್ರತಿಬಿಂಬಿಸುವ ವ್ಯಕ್ತಿಗಳು. ನಿಮ್ಮ ಟ್ಯಾಕ್ಸ್ ಪಾಲಿಸಿಗೆ ಅವರೇನಾದರೂ ಒಪ್ಪುತ್ತಾರೆಯೇ? ಇಲ್ಲವೆಂದು ನಾನು ಕಡ್ಡಾಯವಾಗಿ ಹೇಳುತ್ತೇನೆ. ಇದು ಬಹಳ ಲಘುವಾಗಿ ತೆಗೆದುಕೊಳ್ಳುವ ವಿಚಾರವಲ್ಲ. ಖಂಡಿತವಾಗಿ ಮೆಣಸಿನ ಕಾಯಿಯ ಮೇಲೆ ತೆರಿಗೆಯನ್ನು ಮನ್ನಾಮಾಡಬೇಕು. ಇದು ಸರ್ವಾನುಮತದಿಂದ ಒಪ್ಪತಕ್ಕ ವಿಚಾರವಾಗಿದೆ. ಇದು ನಾನು ಏಕಮಾತ್ರ ಹೇಳುವ ವಾಣಿಯಲ್ಲ.

4-30 P.M.

In the socialistic pattern of Government we are all equal in the eye of God and our State is sovereign republic and we solemnly declare—equality, fraternity and so many things we say, ಸಂತೋಷ, ಒಪ್ಪಿಕೊಳ್ಳುತ್ತೇವೆ, ಬಹಳ ಚೆನ್ನಾಗಿದೆ. ಜನಸಾಮಾನ್ಯರಿಗೆ ಅತಿ ಮುಖ್ಯವಾಗಿ ಆಗಬೇಕಾದ ವಿಚಾರ ಶ್ರೀ ಜಂಬಣ್ಣನವರು ಬಹಳ ಸೊಗಸಾಗಿ ಹೇಳಿದರು. ನಮಗೆ ಬಹಳ ನವಿರಾದ ಫೈನ್ ಬಟ್ಟೆ ಬೇಡಿ. ಷೆಡ್ಯೂಲನಲ್ಲಿ 'medium cotton cloth other than cloth woven on handloom' ಎಂದಿದೆ. ಆದರೆ ಹ್ಯಾಂಡ್‌ಲೂಂಗೆ ವಿನಾಯಿತಿ ಕೊಟಿದ್ದೀರಿ, ಅದನ್ನು ಪ್ರಸ್ತಾಪ ಮಾಡುವುದಿಲ್ಲ. ಮೀಡಿಯಂ ಕ್ಲಾತ್ ಹಾಕಿಕೊಳ್ಳುವುದಕ್ಕೆ ಜನಸಾಮಾ

(ಶ್ರೀ ವೈ. ವೀರಪ್ಪ)

ನ್ಯರು ಅಷ್ಟು ಪಾಪ ಮಾಡಿಲ್ಲ. ಅವರು ಬಳಸುವ, ಹೆಚ್ಚು ಹೆಚ್ಚಾಗಿ ಉಪಯೋಗಿಸುವ ಬಟ್ಟೆಗೆ ಈ ತರಿಗೆ ವಿನಾಯಿತಿ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿದ್ದೆವು. ಅದನ್ನು ಮಾಡಬೇಕಾಗಿತ್ತು. ಹಳ್ಳಿಗಳಲ್ಲಿ ಕೋರ್ಸ್ ಕಾಟನ್ ಕ್ಲಾತ್ ಎಂದರೆ ದುಪಟಿಯನ್ನು ರೈತರು ಮಳೆಗಾಲದಲ್ಲಿ ಹೊಲಗಳಿಗೆ ಹೋಗಬೇಕಾದರೆ, ಕೆಲಸ ಮಾಡಬೇಕಾದರೆ ಮತ್ತು ಯಾವಾಗಲೂ ಉಪಯೋಗಿಸುತ್ತಾರೆ, ಅದಕ್ಕೆ ವಿನಾಯಿತಿ ಕೊಟ್ಟಿಲ್ಲ. ಅದರಿಂದ ಆದಾಯವೂ ಹೆಚ್ಚಾಗಿ ಬರುವುದಿಲ್ಲ. ಒಂದೊಂದು ಕಡೆ ಸಿಂಗಲ್ ಪಾಯಿಂಟ್ ಹಾಕಿದೆ, ಆದರಿಂದ ಬೇರೆಯವರಿಗೆ ಬೀಳುವುದಿಲ್ಲ ಎಂದು ಹೇಳುತ್ತಾರೆ. ಆದರೆ ಅದರ ಪರಿಣಾಮ ನೋಡಬೇಕು, ಈಗ ಬೆಂಕಿಪೊಟ್ಟಣ ತೆಗೆದುಕೊಳ್ಳಿ, ತೆರಿಗೆ ಹಾಕಿದರೆ 65 ಕಡ್ಡಿ ಮಾತ್ರ ಹಾಕಿ ಅಲ್ಲಿ ಕದಿಯುತ್ತಾರೆ, ಅದನ್ನು ಪರೀಕ್ಷೆ ಮಾಡುವುದಕ್ಕಾಗುವುದಿಲ್ಲ. ತೆರಿಗೆ ಹಾಕಿದರೆ ಬೆಂಕಿಪೊಟ್ಟಣ ಎಂಟು ಕಾಸಿಗೆ ಮಾರಬಹುದೆಂದರೆ ಒಂಬತ್ತು ಕಾಸಿಗೆ ಮಾರುತ್ತಾರೆ. ನಾನು ಅನುಭವ ವಿಲ್ಲದೆ ಮಾತನಾಡುತ್ತಿಲ್ಲ, ಚಪಲಕ್ಕಾಗಿ ಮಾತನಾಡುತ್ತಿಲ್ಲ. ನಿಜವಾಗಿಯೂ ಇದು ಅನುಭವದಿಂದ ಹೇಳುವ ಮಾತು, ನಾವೆಲ್ಲಾ ದನ ಸಾಕಿದ್ದೇವೆ. ಹತ್ತಿ ಬೀಜದ ವಿಚಾರ ಶ್ರೀ ಜಂಬಣ್ಣನವರು ಹೇಳಿದರು. ದನಗಳಿಗೆ ಅದು ಮುಖ್ಯವಾದ ಆಹಾರ. ಹಸುಗಳು ಸರಿಯಾಗಿ ಹಾಲು ಕೊಡಬೇಕಾದರೆ ಹತ್ತಿ ಬೀಜ, ತೌಡು, ಹೊಟ್ಟು, ಹಿಂಡಿ ಇವೆಲ್ಲವನ್ನೂ ಕಲಗಚ್ಚಿಗೆ ಹಾಕಬೇಕಾಗುತ್ತದೆ; ಹಾಕದರೇ ಹೆಚ್ಚಾಗಿ ಹಾಲು ಕೊಡುವುದು. ವ್ಯವಸಾಯಕ್ಕೆ ಬಹಳವಾಗಿ ಸಹಾಯ ಮಾಡುವ ಮೂಕಪ್ರಾಣಿಗಳಾದ ಎತ್ತುಗಳಿಗೆ ಹತ್ತಿ ಬೀಜ ಅವಶ್ಯಕ. ಆದ್ದರಿಂದ ಅದಕ್ಕೆ ವಿನಾಯಿತಿ ಕೊಡಬೇಕು, ತೆರಿಗೆ ಹಾಕಿರುವುದನ್ನು ಒಪ್ಪುವುದಕ್ಕಾಗುವುದಿಲ್ಲ, ಹಾಕಿದರೆ ಜನರಿಗೆ ಅನ್ಯಾಯವಾಗುತ್ತದೆ. ಬೆಂಕಿಕಡ್ಡಿ ವಿಚಾರ ಹೇಳಿದ್ದಾರೆ. ಸೀಮೆ ಎಣ್ಣೆ ವಿಚಾರ ಶ್ರೀ ಜಂಬಣ್ಣನವರು ಮತ್ತು ಡಾಕ್ಟರು ಸಹ ಹೇಳಿದರು. ಆದರೂ ಪುನರಾವೃತ್ತಿಯಾಗುತ್ತದೆಂದು ಗೊತ್ತಿದ್ದರೂ ಅನಿವಾರ್ಯ, ಜನಸಾಮಾನ್ಯರಿಗೆ ಇದು ಬೇಕಾದ ವಸ್ತು. ಶ್ರೀ ಷಂಸುದ್ದೀನ್ ಸಾಹೇಬರು ವಿದ್ಯುಚ್ಛಕ್ತಿ ದೀಪ ಉಪಯೋಗ ಮಾಡಬಹುದು. ಹಳ್ಳಿ ರೈತರು ಕೇವಲ ಕೆಲವು ಗಂಟೆ ಕಾಲ ದೀಪ ಹಚ್ಚುತ್ತಾರೆಂದು ಹೇಳಿದ್ದು ನಿಜವಲ್ಲ. ಸಂತೆಗೆ ಗಾಡಿ ಹೊಡೆದುಕೊಂಡು ಹೋಗಬೇಕಾದರೆ, ಹೊಲದ ಹತ್ತಿರ ಪೈರು ಕಾಯುವುದಕ್ಕೆ ಹೋಗಬೇಕಾದರೆ, ರಾತ್ರಿಯೆಲ್ಲಾ ದೀಪ ಉರಿಸಬೇಕಾಗುತ್ತದೆ. ಆದ್ದರಿಂದ ಸೀಮೆ ಎಣ್ಣೆ ಅವಶ್ಯಕತೆ ಜನಸಾಮಾನ್ಯರಿಗೆ ಬಹಳವಾಗಿದೆ. ಅದರ ಮೇಲೆ ಸುಂಕ ಹಾಕಿರುವುದರಿಂದ ಜನರಿಗೆ ನಿಜವಾಗಿಯೂ ತೊಂದರೆಯಾಗುತ್ತದೆ.

ನಾವು ವಾದ ಮಾಡುತ್ತೇವೆ, ನೀವೂ ಕೆಲವು ಸಂದರ್ಭಗಳಲ್ಲಿ ವಾದ ಮಾಡುತ್ತೀರಿ. ಸಮತಾವಾದ ಸರ್ಕಾರ ಸ್ಥಾಪನೆ ಮಾಡಬೇಕೆಂಬುದು ಮುಖ್ಯವಾದ ಗುರಿಯಾಗಿದೆ. ಹಾಗಿರುವಾಗ ಐಶ್ವರ್ಯವಂತರನ್ನು ಹಂತ ಹಂತವಾಗಿ ಕೆಳಕ್ಕೆ ಇಳಿಸಬೇಕು. ಒಂದು ಸಮಾಜ ಸರಿಯಾಗಿ ರಚನೆ ಮಾಡಬೇಕಾದರೆ ಒಂದೇ ಸಲ ಹೆದರಿಸುವುದಕ್ಕಾಗುವುದಿಲ್ಲ, ಹಂತ ಹಂತವಾಗಿ ಐಶ್ವರ್ಯ ಕಿತ್ತುಕೊಳ್ಳಬೇಕು. We must drain wealth in stages. ಈ ವಿಚಾರ ಪ್ರಸ್ತಾಪಿಸುವುದೇಕೆಂದರೆ, ಮೊದಲನೆಯ ಷೆಡ್ಯೂಲನಲ್ಲಿ furs and skins ಎಂದಿದೆ. ಅದನ್ನು ತೆಗೆದುಕೊಳ್ಳುವವರು ರಾಣಿ, ದೊಡ್ಡ ದೊಡ್ಡ ಮನುಷ್ಯರು, ಅವರ ಮನೆಯವರು ಅಥವಾ ಬೀದಿಗಳಲ್ಲಿ ಷೋಕಿ ಮಾಡಿಕೊಂಡು ತಿರುಗುವವರು. ಅವರಿಗೆ ಹೆಚ್ಚಾಗಿ ತೆರಿಗೆ ಹಾಕಿ. ಶೇಕಡ 50ರಷ್ಟು ಹಾಕಿದರೂ ಕೊಡುತ್ತಾರೆ, ಏಕೆಂದರೆ ಅದಕ್ಕೆ ಹೊಂದಿಕೊಂಡಿರುತ್ತಾರೆ, ಶೇಕಡ ನೂರರಷ್ಟು ಹಾಕಿದರೂ ಕೊಂಡುಕೊಳ್ಳುತ್ತಾರೆಂದು ಧಾರಾಳವಾಗಿ ಹೇಳಬಹುದು.

Sri T. MARIAPPA.—Additional levy is seven per cent plus two per cent plus two per cent.

ಶ್ರೀ ವೈ. ವೀರಪ್ಪ.—ಸಮತಾವಾದ ಸರ್ಕಾರ ರಚಿಸೋಣ, ಕ್ರಮ ಕ್ರಮವಾಗಿ ಈ ದಾರಿಯಲ್ಲಿ ಮುಂದುವರಿದರೆ ನಾವೂ ಸಹಾಯ ಮಾಡುತ್ತೇವೆ. ಇದು ಪರಿಶೀಲಿಸಬೇಕಾದ ವಿಚಾರ.

ಫರ್ಟಿಲೈಸರ್ಸ್ ವಿಚಾರ ನೋಡಿದರೆ ನಮ್ಮ ದೇಶದಲ್ಲಿ ಈಗಿರುವ ಲೆಕ್ಕಾಚಾರದ ಆಧಾರದ ಮೇಲೆ ಇಂಡಿಯಾ ದೇಶಕ್ಕೆ 20-30 ಲಕ್ಷ ಟನ್ ರಸಾಯನಿಕ ಗೊಬ್ಬರಬೇಕು; ಈ ದಿವಸ 203 ಲಕ್ಷ ಟನ್ ಉತ್ಪತ್ತಿಯಾಗುತ್ತಿದೆ, ಪ್ರತಿಯೊಬ್ಬ ರೈತರೂ ಸರಿಯಾದ ರೀತಿಯಲ್ಲಿ ಪೈರು ಬೆಳೆಯುವುದಕ್ಕೆ ಅನುಕೂಲವಾಗುತ್ತಿಲ್ಲ, ವಿನಿಯೋಗವಾಗುತ್ತಿಲ್ಲ. ಅಲ್ಲದೆ ರೈತ ಅದನ್ನು ಕೊಂಡು ಉಪಯೋಗಿಸಲು ಅವನ ಆರ್ಥಿಕಸ್ಥಿತಿ ಸರಿಯಾಗಿಲ್ಲದೆ ಉದ್ದೇಶ ನೆರವೇರುತ್ತಿಲ್ಲ. ರೈತನಿಗೆ ಔಷಧಿ, ಎತ್ತುಗಳು ಮುಂತಾದುವೇನು ಬೇಕೋ ಅವನ್ನು ತರಲು ಸಹ ಹಣವಿರುವುದಿಲ್ಲ. ಆದ್ದರಿಂದ ಕಂತುಗಳನ್ನು ಪಾವತಿ ಮಾಡಲು ಅವನಿಗೆ ಎರಡು ವರ್ಷ ಅವಧಿ ಬೇಕು, ಅವನ ಚೈತನ್ಯವೆಲ್ಲಾ ನಶಿಸಿ ಹೋಗಿದೆ. ಸರ್ಕಾರಕ್ಕೆ ಮನದಟ್ಟಾಗಲಿ ಎಂದು ನಮ್ಮ ಕಷ್ಟ ಸುಖಗಳನ್ನು ಪದೇ ಪದೇ ಹೇಳುತ್ತಿದ್ದೇವೆ. ಸಮಾಜಕ್ಕೆ ಅನುಕೂಲವಾಗಲೆಂದು ನಾವಿಷ್ಟು ಮಾತನಾಡುತ್ತಿದ್ದೇವೆ. ಕಾಂಗ್ರೆಸ್ ಚುನಾವಣಾ ಕಾಲದಲ್ಲಿ ತನ್ನ ಪ್ರಣಾಳಿಕೆಯಲ್ಲಿ ಕೆಲವು ಅಂಶಗಳನ್ನು ಸೂಚಿಸಿತ್ತು. ಅದಕ್ಕೂ ಈಗ ಅನುಸರಿಸುತ್ತಿರುವ ನೀತಿಗೂ ಅಜಗಜಾಂತರ ವ್ಯತ್ಯಾಸವಿದೆ. ದಯೆಯಿಟ್ಟು ಜನರಿಗೆ ತೊಂದರೆ ಕೊಡಬಾರದು. ಮಾತೆತ್ತಿದರೆ ಇಂಡಿಯಾ ಸರ್ಕಾರದ ಪ್ಲಾನ್ ಇದೆ, ಅವರ ಡೈರೆಕ್ಷನ್ ಇದೆ ಎಂದು ಹೇಳುತ್ತಾರೆ. ಆದರೆ ನ್ಯಾಯವಾದದ್ದನ್ನು ಮಾಡಿದರೆ ಅವರು ಕತ್ತು ಕೊಯ್ಯುತ್ತಾರೆಯೆ ? ಅನೇಕ ಯೋಜನೆಗಳಿವೆ, ಅವನ್ನು ನಾವು ಕಾರ್ಯಗತ ಮಾಡಿಲ್ಲ. ಈ ದಿವಸ ಕೋಟ್ಯಾಂತರ ರೂಪಾಯಿ ಬೇಕೆಂದು ಹೇಳಿ ಮಾಡಿರುವ ಕೆಲಸದಿಂದ ಸಾಕಷ್ಟು ಪ್ರಯೋಜನವಾಗಿಲ್ಲ. ಎಷ್ಟೇ ಹೇಳಿದರೂ ಇನ್ನೂ ಉಳಿತಾಯ ಯೋಜನೆ ಮಾಡಿಲ್ಲ; ಮಾಡಿದ್ದರೆ ಚೆನ್ನಾಗಿತ್ತು. ಶ್ರೀ ರಾಜಯ್ಯ ಶೆಟ್ಟರು ಹೇಳಿದ ತತ್ವ ಲಘುವಾಗಿ ಕಾಣಬಹುದು. ಆದರೆ ಅದನ್ನು ಪ್ರಾಮಾಣಿಕತನದಿಂದ ಅನುಸರಿಸಿದರೆ ಹಣ ಬರುತ್ತದೆ. ನಿಮ್ಮಲ್ಲಿ ದಕ್ಷತೆ ಇಲ್ಲವೆಂದು ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ಅನೇಕ ರೆವೆನ್ಯೂ ಬಾಕಿಯಿದೆ, ಮಾರಾಟ ತೆರಿಗೆ ಬಾಕಿಯಿದೆ, ಎಕ್ಸೈಜು ಸುಂಕ ಬಾಕಿಯಿದೆ ಎಂದು ಆ ವಿಚಾರದಲ್ಲಿ ಪ್ರಶ್ನೆ ಹಾಕಿದ್ದೇವೆ; 20 ವರ್ಷಗಳಿಂದ ಈ ಬಾಬುಗಳಲ್ಲಿ ಬೇಕಾದಷ್ಟು ಬಾಕಿ ಬಾರದೆ ನಿಂತಿದೆ. ಈ ದಿವಸ ಫೈನಾನ್ಷಿಯಲ್ ಎಂಕ್ವೈರಿ ಕಮಿಟಿಯ ವರದಿ ಪ್ರಕಾರ ಮಾಧವರಾವ್ ಕಮಿಟಿ ವರದಿಯ ಪ್ರಕಾರ ಒಂದೂವರೆ ಕೋಟಿ ರೂಪಾಯಿಗಳ ಬಾಕಿಯಿದೆ; ಅಂಕಿ ಅಂಶವಿದೆ. ಇದನ್ನು ಗಮನಿಸಿ ಏಕೆ ಬಾಕಿಯಿದೆ, ಎಷ್ಟು ಜನ ಯಾವಯಾವ ತೆರಿಗೆಯನ್ನು ಎಷ್ಟೆಷ್ಟು ಕೊಡಬೇಕಾಗಿದೆ, ಏಕೆ ವಸೂಲು ಮಾಡದೆ ಬಿಟ್ಟಿ

ದ್ದಾರೆ, ಏಕೆ ಬರಬೇಕಾದ್ದನ್ನು ಒದ್ದು ವಸೂಲು ಮಾಡಲಿಲ್ಲ ಎಂದು ವಿಚಾರಿಸಿ ಸೂಕ್ತ ಕ್ರಮ ಏಕೆ ಕೈಕೊಳ್ಳಲಿಲ್ಲ ?

ಶ್ರೀ ಟಿ. ಮರಿಯಪ್ಪ.—ಎಲ್ಲಾ ತೆರಿಗೆಗಳನ್ನೂ ವಸೂಲು ಮಾಡಬೇಕೆಂದು measures tighten up ಮಾಡಿದೆ.

ಶ್ರೀ ವೈ. ವೀರಪ್ಪ.—ಸಂತೋಷ, ಆದಾಯ ಹೆಚ್ಚಿಸೋಣ, ಸಮಾಜ ಚೆನ್ನಾಗಿ ಬೆಳೆಸೋಣ, ಜನರಿಗೆ ಸರಿಯಾಗಿ ಸೇವೆ ಮಾಡೋಣ ; ನಾವು ಬಂದಿರುವುದೇ ಅದಕ್ಕೆ, ಕಾಂಗ್ರೆಸ್ ರಾಜ್ಯಭಾರವನ್ನು ಟೀಕೆ ಮಾಡುವುದಕ್ಕೆ ಬಂದಿಲ್ಲ. ಒಟ್ಟಿನಲ್ಲಿ ಅಧ್ಯಕ್ಷರ ಮೂಲಕ ನಮ್ಮ ಮಿತ್ರರಿಗೆ ಹೇಳುವುದು ಜನಸಾಮಾನ್ಯರಿಗೆ ಬೇಕಾದ ಹತ್ತಿಬೀಜ, ಸೀಮೆಎಣ್ಣೆ, ಕೋರ್ಸ್ ಕಾರ್ಟ, ದುಪಟಿ ಇವಕ್ಕೆಲ್ಲಾ ತೆರಿಗೆ ಹಾಕಬಾರದು. ದುಪಟಿ ರೈತರಿಗೆ ಪ್ರತಿಯೊಂದು ಕಾಲದಲ್ಲೂ ಬೇಕು, ಹಳ್ಳಿಯಲ್ಲಿ ರಾತ್ರಿ ಹೊದ್ದುಕೊಳ್ಳುವುದಕ್ಕೆ ಬೇಕು. ನಿಜವಾಗಿಯೂ ಜನಸಾಮಾನ್ಯರಿಗೆ ಬೇಕಾದ ಇಂಥ ಪದಾರ್ಥಗಳ ದರ ಕಡಮೆಯಾದರೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ನಾನೂ ಮತ್ತು ನನ್ನ ಮಿತ್ರರೂ ಹೇಳಿರುವ ಅಂಶಗಳನ್ನೂ ಸರ್ಕಾರ ಗಮನಿಸಿ ಸೂಕ್ತ ಮಾರ್ಗವನ್ನನುಸರಿಸಿದರೆ ನಮಗೂ, ನಿಮಗೂ, ರಾಷ್ಟ್ರಕ್ಕೂ ಕ್ಷೇಮ ಎಂದು ಸೂಚಿಸಿ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

ಡಾ|| ಸರ್ದಾರ್ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ ಈ ದಿವಸ ನಮ್ಮ ಸಭೆಯ ಮುಂದಿರತಕ್ಕ ಈ ಮಾರಾಟ ತೆರಿಗೆ ಮಸೂದೆಯ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನೂ ಮತ್ತು ಕೆಲವು ಮಾತುಗಳನ್ನೂ ಹೇಳಲಿಚ್ಛಿಸುತ್ತೇನೆ. ನಮಗೆ ಸ್ವಾತಂತ್ರ್ಯ ಸಿಕ್ಕಿ ಇಲ್ಲಿಗೆ ಹತ್ತು ವರ್ಷಗಳಾದವು. ಆದರೆ ಇಲ್ಲಿಯವರೆಗೂ ಆ ಉತ್ತರ ಕರ್ಣಾಟಕದ ಮಂದಿಗೆ ಟ್ಯಾಕ್ಸ್ ಎಂದರೆ ಕರ ಎಂದು ಅರ್ಥವಾಗುತ್ತಿತ್ತು. ಆದರೆ ಈಕಡೆ ಮಂದಿ ಇದಕ್ಕೆ ಏನು ಹೇಳುತ್ತಾರೋ ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ಇಲ್ಲಿ "ಟ್ಯಾಕ್ಸ್" ಎಂಬುದಕ್ಕೆ ಅರ್ಥ ತೆರಿಗೆ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಕಂದಾಯವೆಂದೂ ಹೇಳುವುದುಂಟು.

ಶ್ರೀ ಬಿ. ಕೆ. ನಾಗೂರ್.—ಬಹಳ ಸಂತೋಷ. ಆದರೆ ಯಾವ ಟ್ಯಾಕ್ಸನ್ನೂ ಹಾಕದೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲವೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಆದರೆ ಹಾಗೆ ಟ್ಯಾಕ್ಸನ್ನು ಹಾಕಬೇಕೆಂದು ಹೇಳುವುದರಲ್ಲೂ ಕೂಡ ಒಂದು ಮಿತಿ, ಒಂದು ಅಳತೆ ಇರಬೇಕಾದದ್ದು ಅಗತ್ಯ. ಏಕೆಂದರೆ ಈ ದಿವಸ ಸರ್ಕಾರ ಜನರಿಗೆ ಉಸಿರಾಡುವುದೊಂದಕ್ಕೆ ಬಿಟ್ಟು ಇನ್ನುಳಿದ ಪ್ರತಿಯೊಂದು ಬಾಬಿಗೂ ಬೆಳ್ಳುಳ್ಳಿ, ಉಳ್ಳಾಗಡ್ಡೆ, ತಲೆಣ್ಣೆ, ಮೆಣಸಿನಕಾಯಿ ; ಮೆಣಸು, ಏಲಕ್ಕಿ, ಲವಂಗ, ಕೊಬ್ಬರಿ, ಕೊಬ್ಬರಿಎಣ್ಣೆ, ತೆಂಗಿನಕಾಯಿ, ಶಿಂಗಾ, ಹತ್ತಿ ; ಅರಳಿ, ಬೀಡಿ, ಸಿಗರೇಟು ಈ ಎಲ್ಲಕ್ಕೂ ಟ್ಯಾಕ್ಸ್ ಹಾಕಿದ್ದಾರೆ. ಹೀಗಾದರೆ ಇದಕ್ಕೆ ಮಿತಿ ಏನಾದರೂ ಇದೆಯೇ? ಆದರೆ ಜನರು ಉಸಿರಾಡುವುದಕ್ಕಾದರೂ ಸರ್ಕಾರದವರು ಟ್ಯಾಕ್ಸ್ ಹಾಕದಿರುವುದಕ್ಕಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಈಗ ನಮಗೇನು ಸ್ವಾತಂತ್ರ್ಯ ಒಂದು ಲಭ್ಯವಾಗಿದೆಯೋ ಅದು ಬರುವುದಕ್ಕೆ ಮುನ್ನ ಆ ಮಹಾತ್ಮಾ ಗಾಂಧಿಯವರೇ ನಮ್ಮ ರಾಜ್ಯ ರೈತರಾಜ್ಯವಾಗಬೇಕು, ರಾಮರಾಜ್ಯವಾಗಬೇಕು ರೈತನು ಆಳತಕ್ಕ ರಾಜ್ಯವಾಗಬೇಕು ಎಂಬುದಾಗಿ ಹೇಳುತ್ತಿದ್ದರು. ಆದರೆ ಹಾಗೆ ಆ ದಿವಸ ಅವರು ಬಯಸುತ್ತಿದ್ದಂಥ ರೈತನ ರಾಜ್ಯ ಸ್ವಾತಂತ್ರ್ಯ ಬಂದ ಮೇಲೆ ಇಂದು ಯಾವ ರೀತಿ ನಡೆಯುತ್ತಿದೆಯೆಂಬುದನ್ನೂ, ಈ ದಿವಸ ರಾಜ್ಯದಲ್ಲಿ ರೈತನಿಗೇನು ಸೌಲಭ್ಯ ದೊರೆಯುತ್ತಿದೆಯೆಂಬುದನ್ನೂ ಸರ್ಕಾರದವರು ಅಷ್ಟಾಗಿ ಪರಿಶೀಲನೆ ಮಾಡಿರುವುದಿಲ್ಲವೆಂದು ನಾನು ಅವರಿಗೆ ತಿಳಿಸಬೇಕಾಗಿದೆ. ಆದರೇನು ಮಾಡುವುದು ! ಇದೊಂದು ನಮ್ಮ ದೊಡ್ಡ ದುರ್ದೈವ! ಆದರೆ ಕೇವಲ ಒಂದೇ ಒಂದು ನೆಪದಿಂದ—ಎಂದರೆ ಟ್ಯಾಕ್ಸ್ ಹಾಕದೆ ಸರ್ಕಾರವನ್ನು ನಡೆಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಎಂಬ ಕಾರಣದಿಂದ ದೇಶಕ್ಕೆ ಯಾರು ಬೆನ್ನು ಎಲುಬಿನಂತಿದ್ದಾರೆಂದು ಹೇಳುತ್ತಿದ್ದಾರೋ ಅಂಥಾ ರೈತರ ಮೇಲೆ ಈ ಹೊತ್ತು ನಾನಾ ರೀತಿಯ ಕರಗಳನ್ನು ಹಾಕಿ ಅವರ ಬೆನ್ನು ಎಲುಬು ಮುರಿದು ಅವರನ್ನು ಎಲ್ಲಿಯ ತನಕ ತುಳಿಯಲು ಹೊರಟಿದ್ದಾರೆಂಬುದನ್ನು ಈಗ ಎಲ್ಲರೂ ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ನಮ್ಮ ಸರ್ಕಾರ ಕೇವಲ ಕಡುಬಡವನು ಉಪಯೋಗಿಸತಕ್ಕಂಥಾ ಉಳ್ಳಾಗಡ್ಡೆ-ಬಳ್ಳುಳ್ಳಿ, ಮೆಣಸಿನಕಾಯಿ, ಕರಿಯೋ ಎಣ್ಣೆ ಇಂಥಾ ವಸ್ತುಗಳ ಮೇಲೆಲ್ಲಾ ಕರ ಹಾಕಿದ್ದಾರೆ. ಇದರಿಂದ ಆ ಬಡ ರೈತನ ಎಲುಬುಗಳೆಲ್ಲ ಮುರಿದು, ತೊಗಲು ಕಿತ್ತು ಹೋಗಿ ಅವನು ಸರ್ಕಾರದ ದವಡೆಯಲ್ಲಿ ಸಿಕ್ಕಿಕೊಂಡು ಆತನ ಶರೀರದಿಂದ ಬರುತ್ತಿರುವ ರಕ್ತದಲ್ಲಿ ಕರಾ-ಕರಾ-ಕರಾ ಎಂಬ ಶಬ್ದ ಹೊರಡುತ್ತಿದೆ ಎಂಬ ಅಂಶವನ್ನು ಸರ್ಕಾರದವರು ತಿಳಿದುಕೊಂಡಿದ್ದಾರೆಯೋ ಇಲ್ಲವೋ ಆ ವಿಚಾರ ನನಗೆ ಗೊತ್ತಿಲ್ಲ.

ಈ ದಿವಸ ಸರ್ಕಾರದವರು ಟ್ಯಾಕ್ಸ್ ಹಾಕಿರತಕ್ಕ ವಸ್ತುಗಳಲ್ಲಿ ಬೆಳ್ಳುಳ್ಳಿ ಒಂದನ್ನು ಈಗ ತೆಗೆದುಕೊಳ್ಳೋಣ. ಇದರ ಉಪಯೋಗ ಅನೇಕ ರೀತಿಯಲ್ಲಿದೆ. ಸಾಮಾನ್ಯವಾಗಿ ಎಲ್ಲಾ ಜನರೂ ಉಪಯೋಗಿಸುವ ರೀತಿಯೊಂದನ್ನು ಬಿಟ್ಟರೆ ಇದು ಶಾಸ್ತ್ರೋಕ್ತವಾಗಿ ನಮ್ಮ ಆಯುರ್ವೇದದ ರೀತ್ಯಾ ಮನೆಯಲ್ಲಿ ಸಣ್ಣ ಮಕ್ಕಳಿಗೆ ಸೀಕ್ ಇತ್ಯಾದಿ ಏನಾದರೂ ಆದರೆ ಈಗಿನ ಜನರಂತೆ ತಕ್ಷಣ ಡಾಕ್ಟರ ಬಳಿಗೇನೂ ಓಡಿಹೋಗಬೇಕಾದುದಿಲ್ಲ, ಮನೆಯಲ್ಲಿರುವ ತಾಯಿಯೋ-ಅಜ್ಜಿಯೋ ಏನೋ ಥಂಡಿ, ಜ್ವರ ಅಥವಾ ಶೀತ ಆಗಿರಬೇಕೆಂದು ಆಲೋಚಿಸಿ ಆ ಮಕ್ಕಳನ್ನು ಗಾಳಿಯಲ್ಲಿ ತಿರುಗಾಡಲು ಬಿಡದಂತೆ ಅವರನ್ನು ಮನೆಯಲ್ಲಿಯೇ ನಿಲ್ಲಿಸಿಕೊಂಡು ಅವರಿಗೆ ಈ ಬೆಳ್ಳುಳ್ಳಿಯನ್ನು ತಿನ್ನಿಸುತ್ತಿದ್ದರು. ಮತ್ತು ಜಜ್ಜಿ ತಲೆಗೆ ಹಾಕಿ ಕಟ್ಟುತ್ತಿದ್ದರು. ಹೀಗೆ ಈ ಬೆಳ್ಳುಳ್ಳಿಗೆ ಈ ದಿವಸ ಬಡವರ ಕಸ್ತೂರಿ ಎಂಬ ಗಾದೆ ಬಂದಿದೆ. ಇದು ಅಂಥಾ ಸಂಜೀವಿನಿಯಂತಿದೆ. ಇದರ ಮೇಲೆ ಟ್ಯಾಕ್ಸ್ ಹಾಕಬಾರದೆಂದು ಕೇಳಿಕೊಂಡಿದ್ದೆವು. ಆದಾಗ್ಯೂ ಇದರ ಮೇಲೆ ಟ್ಯಾಕ್ಸನ್ನು ಹಾಕಿದ್ದಾರೆ. ಇದಕ್ಕೆ ನಾನು ಬಹಳ ವಿಷಾದಪಡುತ್ತೇನೆ. ಬೆಳ್ಳುಳ್ಳಿ ವಿಚಾರ ಇಷ್ಟಾದ ಮೇಲೆ ಇನ್ನು ಆ ಉಳ್ಳಾಗಡ್ಡೆಯ ವಿಚಾರವನ್ನು ತೆಗೆದುಕೊಂಡರೆ ಮತ್ತಷ್ಟು ವಿಷಾದಕರವಾಗಿದೆ. ಅದಕ್ಕಾಗಿ ನಾನು ಬಹಳ ಸಂಕಟಪಡುತ್ತಿದ್ದೇನೆ. ಆದರೆ ನಮ್ಮ ಉತ್ತರ ಕರ್ಣಾಟಕದ ಮಂದಿ—ಅದರಲ್ಲೂ ಬಡ ಜನರು—ಹೊಲ-ಗದ್ದೆಗಳಲ್ಲಿ ಕೆಲಸ ಮಾಡತಕ್ಕ ರೈತರು ಈ ಉಳ್ಳಾಗಡ್ಡೆಯನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆಂಬ ಅಂಶ ಬಹಳವಾಗಿ ನಮ್ಮ ಸರ್ಕಾರದವರಿಗೆ ಗೊತ್ತಿದ್ದಂತಿಲ್ಲ. ಸಾಯಂಕಾಲದ ವರೆಗೂ ಹೊಲದಲ್ಲಿ ಕಷ್ಟಪಟ್ಟು ಕೆಲಸಮಾಡಲು ಹೋಗಬೇಕಾಗಿರುವಂಥಾ ರೈತ ನುಚ್ಚು—ಉಳ್ಳಾಗಡ್ಡೆ ಮತ್ತು ಮಜ್ಜಿಗೆ

(ಶ್ರೀ ಬಿ. ಕೆ. ನಾಗೂರ್)

ಈ ಮೂರನ್ನೂ ಸೇರಿಸಿ ಹೊಡೆಯಲು ಆರಂಭಿಸಿದರೆ ನಾಲ್ಕು ಐದು ಉಳ್ಳಾಗಡ್ಡೆಗಳನ್ನು ಹೊಡೆದುಬಿಡುತ್ತಾನೆ. ಈ ಜೋಳದ ನುಚ್ಚೇ ಆ ರೈತನ ಮುಖ್ಯ ಜೀವನಾಧಾರ. ಇದಕ್ಕೆ ಉಳ್ಳಾಗಡ್ಡೆಯಿಲ್ಲದೆ ಹೋದರೆ ಆತನ ಜೀವನವೇ ದುಸ್ತರವಾದೀತು. ಹೀಗೆ ನಮ್ಮ ಭಾಗದಲ್ಲಿ ಈ ಉಳ್ಳಾಗಡ್ಡೆಯನ್ನು ರೈತರೂ ಇತರೇ ಸಾಮಾನ್ಯ ಜನರೂ ಬಹಳವಾಗಿ ಉಪಯೋಗ ಮಾಡುತ್ತಿದ್ದಾರೆ. ಆದರೆ ಇಲ್ಲಿಯ ಜನರಲ್ಲಿ ಇದರ ಬಳಕೆ ಹೇಗೆ ಇದೆಯೋ ಅದು ನನಗೆ ತಿಳಿಯದು. ಅಂತೂ ಈ ದಿವಸ ಈ ಉಳ್ಳಾಗಡ್ಡೆಯ ಮೇಲೂ ಟ್ಯಾಕ್ಸ್ ಹಾಕಲು ಹೊರಟಿದ್ದಾರೆ. ಬಡವನ ಜೀವನ ಭಗವಂತನಿಗೇ ಅರಿವಾಗಬೇಕು! ಕರಿಯುವ ಎಣ್ಣೆಯ ಮೇಲೂ ತೆರಿಗೆ ಹಾಕಿದ್ದಾರೆ. ಈ ದಿವಸ ಬಡವನ ಮನೆಯಲ್ಲಿ ಮೂರು ಸಂಜೆಯಾದರೂ ದೀಪ ಹಚ್ಚಲು ಎಣ್ಣೆ ಇಲ್ಲದೆ ಅವನು ಪಕ್ಕದ ಮನೆಗೆ ಹೋಗಿ—ನೆರಮನೆಯಿಂದ ಬೇಡಿ ತರಬೇಕಾಗಿದೆ. ಆದರೆ ಕೆಲವರೇನೋ ಈಗ ಚಿಮಣಿ ಎಣ್ಣೆ ಹಾಕಿ ಉರಿಸುತ್ತಾರೆ. ಹೀಗೇ ನಾವು ನೋಡುತ್ತಾ ಹೋದರೆ ಪ್ರತಿಯೊಂದು ಸಾಮಾನಿನ ಮೇಲೂ ಈ ಕರ ಬಿದ್ದೇ ಬೀಳುತ್ತಿದೆ ಎಂಬುದು ಈ ಮಸೂದೆಯಲ್ಲಿ ಕಂಡು ಬರುತ್ತದೆ. ಆದರೆ ಈ ಮಸೂದೆಯಲ್ಲಿ ಯಾವ ಕೆಲವು ಸಾಮಾನುಗಳ ಮೇಲೆ ಟ್ಯಾಕ್ಸ್ ಹಾಕಿದ್ದೀರೋ ಆ ಪೈಕಿ ಕೆಲವು ಸಾಮಾನುಗಳನ್ನಾದರೂ ಸರ್ಕಾರದವರು ಆ ಲಿಸ್ಟಿನಿಂದ ತೆಗೆದುಹಾಕಬೇಕಾಗಿತ್ತೆಂದು ನಾನು ಹೇಳುತ್ತೇನೆ. ಇನ್ನು ನಾನೀಗ ಸರ್ಕಾರದವರಿಗೆ ಕೆಲವು ಸೂಚನೆಗಳನ್ನು ಕೊಡಲಿಚ್ಛಿಸುತ್ತೇನೆ. ಎಣ್ಣೆಯ ಮೇಲೆ ಟ್ಯಾಕ್ಸ್ ಹಾಕಬಾರದೆಂದು ಹೇಳುತ್ತೇನೆ. ಈ ಹಿಂದೆ ದೇಶದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಲಾಯಿತು. ದೇಶಕ್ಕೆ ಉಪ್ಪು ಅಷ್ಟು ಉಪಕಾರಿಯಾದದ್ದು. ಆದರೆ ಆ ಉಪ್ಪಿನ ಜೊತೆಯಲ್ಲೇ ಮೆಣಸಿನಕಾಯಿಯ ಹೆಸರೂ ಕೂಡ ಅಂಟಿಕೊಂಡೇ ಬರುತ್ತಿದೆ. ಎಲ್ಲಿ ಹೋದರೂ ಉಪ್ಪಿನ ಶಬ್ದ ಬರುವಕಡೆ ಮೆಣಸಿನಕಾಯಿಯ ಶಬ್ದವೂ—ಮೆಣಸಿನಕಾಯಿ ಶಬ್ದ ಬರುವಲ್ಲಿ ಉಪ್ಪಿನ ಶಬ್ದವೂ ಇದ್ದೇ ಇರುತ್ತದೆ. ಯಾರೊಬ್ಬರು ಒಂದು ಸಂತೆಗೆ ಹೋಗಬೇಕಾಗಿದ್ದರೂ ಅಲ್ಲಿ ಕೇವಲ ಉಪ್ಪು, ಮೆಣಸಿನಕಾಯಿ ವಿಚಾರ ಹೊರತು ಮತ್ತೊಂದು ಮಾತಿಲ್ಲ. ಹೀಗಿರುವಾಗ ಆ ಮೆಣಸಿನಕಾಯಿ ಈ ಹೊತ್ತು ನಮ್ಮ ಉತ್ತರ ಕರ್ಣಾಟಕದಲ್ಲಿ ಯಾವ ರೀತಿ ಬಡವನ ಜೀವನಾಧಾರ ವಸ್ತುವಾಗಿದೆ ಎಂಬುದನ್ನು ನಾನು ಮಾನ್ಯ ಮಂತ್ರಿಗಳಿಗೆ ಖುದ್ದಾಗಿ ತೋರಿಸಬೇಕೆಂಬ ಅಭಿಪ್ರಾಯವಿದೆ. ಮಂತ್ರಿಗಳಿಗೇನು ಹೇಗೂ 30 ಸಾವಿರ ರೂಪಾಯಿಗಳ ಕಾರಿದೆ. ಅವರು ನಮ್ಮ ಕಡೆಗೆ ಬರಲಿ. ಆಗ ನಾನು ಅವರನ್ನು ಕೆಲವು ಹಳ್ಳಿಗಳಿಗೆ ಒಳ್ಳೆಯ ಗೆಜ್ಜೆಯ ಸರ ಹಾಕಿದ ಎತ್ತಿನ ಚಕ್ಕಡಿಯಲ್ಲಿ ಕರೆದುಕೊಂಡು ಹೋಗುತ್ತೇನೆ. ಆಗ ಇವರಿಗೆ ಅಲ್ಲಿನ ವಿಚಿತ್ರಗಳು ಹೇಗಿವೆ ಎನ್ನುವುದು ಗೊತ್ತಾಗುವುದು. ಆ ಹಳ್ಳಿಯ ಜನರು ನಮ್ಮ ಕಡೆ ರೊಟ್ಟಿ-ಮೆಣಸಿನಕಾಯಿ ಎರಡನ್ನೂ ಬೆರಸಿ ತಿನ್ನುತ್ತಾರೆ. ಮೆಣಸಿನಕಾಯಿ ಇಲ್ಲದೆ ರೊಟ್ಟಿ ತಿನ್ನಲು ಸಾಧ್ಯವೇ ಇಲ್ಲ. ಅಂಥ ಖಾರಕ್ಕೂ ಸಹ ತಾವು ಈ ದಿವಸ ಟ್ಯಾಕ್ಸ್ ವಿಧಿಸದೆ ಬಿಟ್ಟಿರುವುದಿಲ್ಲ. ಇದು ತುಂಬಾ ಶೋಚನೀಯವಾದಂಥ ವಿಚಾರ. ನಮ್ಮ ಭಾರತದಲ್ಲಿ ಈ ಹೊತ್ತು ಬಹಳ ಜನರು ಬಳಸುವ ಸಾಮಾನುಗಳೆಂದರೆ ಈ ಮೆಣಕಾಸಿಕಾಯಿ, ಉಳ್ಳಾಗಡ್ಡೆ, ಬಳ್ಳೊಳ್ಳಿ, ಎಣ್ಣೆ ಇತ್ಯಾದಿಗಳು. ಈ ವಸ್ತುಗಳೆಲ್ಲಾ ರೈತನಿಗೆ ಜೀವಾಳ. ಇಂಥ ಸಾಮಾನುಗಳ ಮೇಲೆ ತಾವು ಟ್ಯಾಕ್ಸ್ ಹಾಕಿರತಕ್ಕದ್ದನ್ನು ನಾವು ಒಪ್ಪಲು ಖಂಡಿತ ಸಾಧ್ಯವಿಲ್ಲ. ನಾನು ಈ ವಿಚಾರವನ್ನು ಬಹಳ ಕಳಕಳಿಯಿಂದ ಅರಿಕೆಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಈಗ ಈ ಮಸೂದೆಯಲ್ಲಿ ಗಾಣದ ಎಣ್ಣೆಗಳಿಗೆಲ್ಲ ತೆರಿಗೆ ವಿನಾಯಿತಿ ಕೊಟ್ಟಿದೆ.

ಶ್ರೀ ಬಿ. ಕೆ. ನಾಗೂರ್.—ಶೇಂಗಾ ಎಣ್ಣೆಗೂ ಕೊಟ್ಟಿದ್ದೀರಾ?

ಶ್ರೀ ಟಿ. ಮರಿಯಪ್ಪ.—ಗಾಣದ ಎಣ್ಣೆಗಳಿಗೆಲ್ಲಾ ವಿನಾಯಿತಿ ಕೊಡಲಾಗಿದೆ.

ಶ್ರೀ ಬಿ. ಕೆ. ನಾಗೂರ್.—ಇನ್ನು ಹತ್ತಿ ಅರಳೆಯ ವಿಚಾರವಾಗಿ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಬೊಂಬಾಯಿಯಲ್ಲಿ ಇದಕ್ಕೆ ಒಂದು ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಇಲ್ಲಿ ತಾವು ಎರಡು ಪರ್ಸೆಂಟ್ ಹಾಕಿದ್ದೀರಿ. ಆದರೆ ಈ ಹತ್ತಿ ಅರಳೆಯ ವ್ಯವಹಾರದಲ್ಲಿ ಇದರ ವ್ಯವಸಾಯದಲ್ಲಿ ಏನು ತೊಂದರೆಯಿದೆ ಎಂಬುದನ್ನು ನಾನೀಗ ತಮ್ಮ ಮುಂದಿಡಲು ಅಪೇಕ್ಷಿಸುತ್ತೇನೆ. ಬಿಜಾಪುರ ಮತ್ತು ಸೋಲಾಪುರಗಳಲ್ಲಿ ಈ ಗಿರಣಿ. . .

ಶ್ರೀ ಟಿ. ಮರಿಯಪ್ಪ.—ತಾವು ಷೆಡ್ಯೂಲಿನಲ್ಲಿ ನೋಡಿ. ಸೆಲೆಕ್ಟ್ ಸಮಿತಿಯವರು ಹಿಂದೆ ನಾಲ್ಕು ಪರ್ಸೆಂಟ್ ಇದ್ದುದನ್ನು ತೆಗೆದುಹಾಕಿ ಈಗ ಕೇವಲ ಒಂದು ಪರ್ಸೆಂಟ್ ಮಾತ್ರ ಹಾಕಲಾಗಿದೆ.

ಶ್ರೀ ಬಿ. ಕೆ. ನಾಗೂರ್.—ಹಾಗಿದ್ದರೆ ಬಹಳ ಸಂತೋಷ. ನಾನು ಈ ವಿಚಾರವನ್ನು ಏಕೆ ಹೇಳಲು ಹೊರಟಿದ್ದೇನೆಂದರೆ ನಮ್ಮಲ್ಲಿ ಗೋಳ ಗುಮ್ಮಟ ಬಹಳ ಪ್ರಸಿದ್ಧವಾಗಿದೆ. ಈಗ ಹತ್ತಿ ಅರಳೆಯ ಮೇಲೆ ಎರಡು ಪರ್ಸೆಂಟ್ ಕರ ಹಾಕಿದ್ದಾರೆ. ಮುಂಬೈ ಪ್ರಾಂತದ ಸೊಲ್ಲಾಪುರ ನಮ್ಮ ಬಿಜಾಪುರಕ್ಕೆ ಸಮೀಪ. ಅಲ್ಲಿ ಒಂದು ಪರ್ಸೆಂಟ್ ಇದೆ. ಆದ್ದರಿಂದ ವ್ಯಾಪಾರವೆಲ್ಲಾ ಅಲ್ಲಿಗೇ ಹೋಗುತ್ತದೆ. ನಮ್ಮಲ್ಲಿ ಕೇವಲ ಗೋಳ ಗುಮ್ಮಟ ಒಂದೇ ಉಳಿಯುತ್ತದೆ. ಆದರೆ ಈಗ ಆ ಹತ್ತಿಯಮೇಲೆ ತೆರಿಗೆ ಕಡಮೆ ಮಾಡಿದ್ದಕ್ಕಾಗಿ ನಾನು ನಮ್ಮ ಮಾನ್ಯ ಅರ್ಥ ಸಚಿವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಆ ಸೆಲೆಕ್ಟ್ ಸಮಿತಿಯವರಿಗೇನೂ ಇಲ್ಲವೋ?

ಶ್ರೀ ಬಿ. ಕೆ. ನಾಗೂರ್.—ಅವರಿಗೂ ಕೂಡ ನನ್ನ ಧನ್ಯವಾದಗಳು. ಅವರು ಮತ್ತೇನು ಕೇಳಿದರೂ ಕೊಡುತ್ತೇನೆ. ಆದರೆ ಸೆಲೆಕ್ಟ್ ಸಮಿತಿಯವರು ಯಾವ ಒಂದು ಮೂಲ ಬದಲಾವಣೆ ಇದರಲ್ಲಿ ಮಾಡಬೇಕಾಗಿತ್ತೋ ಅದನ್ನು ಅವರು ಮಾಡಿಲ್ಲ. ಇದ್ದದ್ದನ್ನು ಇದ್ದ ಹಾಗೇ ತಿದ್ದುಪಡಿ ಮಾಡಿದ್ದಾರೆ; ಹೇಗೆ ಎಂದರೆ "ಕಾಲು ತೆಗೆ ನಾನು ಪಾದ ಇಡುತ್ತೇನೆ" ಎಂದು ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ. ಆ ರೀತಿ ಮಾಡಿದ್ದಾರೆ. ಆ ಸೆಲೆಕ್ಟ್ ಸಮಿತಿಯವರು ಅಂಥ ದೊಡ್ಡ ಪರಿಶೀಲನೆಯೇನನ್ನೂ ಮಾಡಿಲ್ಲ. ಬ್ರಾಂಡಿ-ಗಾಂಜಾ ಇತ್ಯಾದಿ ಕೆಲವು ವಸ್ತುಗಳ ಮೇಲೆ ಕಡಮೆ ಟ್ಯಾಕ್ಸ್ ಹಾಕಿದ್ದಾರೆ. ಇದನ್ನೆಲ್ಲ ನಾನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಈ ವಿಧವಾದ ಟ್ಯಾಕ್ಸ್ ನೀತಿಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಆದರೆ ಈವರೆಗೂ ನಾನು ಹೇಳಿರತಕ್ಕ ಸಾಮಾನುಗಳ ಮೇಲೆ ಟ್ಯಾಕ್ಸ್ ಬೀಳುವುದಿಲ್ಲ; ಮಹಾ ಜನರ ಮೇಲೆ ನಾವು ಟ್ಯಾಕ್ಸ್ ಹಾಕುವುದಿಲ್ಲ ಎಂದು ತಿಳಿಸಿದ್ದರೆ ಆಗ ನಾನು ಈ ಬಿಲ್ಲಿಗೆ ನನ್ನ ಒಪ್ಪಿಗೆ ಕೊಡುತ್ತಿದ್ದೆನು. ಆದರೆ ಈಗ ಮಾನ್ಯ ಮಂತ್ರಿಗಳು ಹೇಳಿದರು, ಬ್ರಾಂಡಿಯ ಮೇಲೆ ಶೇಕಡ 25 ಟ್ಯಾಕ್ ಹಾಕಿದ್ದೇವೆ ಎಂದು

ನಮಗೆ ಈ ವಸ್ತುವಿನ ಮೇಲೆ ತಾವು ಇನ್ನೂ ಶೇಕಡ 25 ಜಾಸ್ತಿ ಹಾಕಿದ್ದರೂ ಸಂತೋಷವಿತ್ತು. ಆ ಬಗ್ಗೆ ತಮಗೆ ನಾವು ನಮ್ಮ ಧನ್ಯವಾದಗಳನ್ನು ಕೊಡುತ್ತಿದ್ದೆವು. ಆದರೆ ಕೆಲವು ದಿನಗಳ ಹಿಂದೆ ಇದೇ ಸಭೆಯಲ್ಲಿ ಆ ಪಾನನಿರೋಧದ ಬಗ್ಗೆ ಚರ್ಚೆಯಾಗುತ್ತಿದ್ದಾಗ ಅದು ನಮ್ಮಲ್ಲಿ ಸಕ್‌ಸಸ್ ಆಗುವುದಿಲ್ಲವೆಂಬುದಾಗಿ ಮೂರು, ನಾಲ್ಕು ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಆ ಪೈಕಿ ನಾನೂ ಒಬ್ಬ. ಇದನ್ನು ದೇಶಾದ್ಯಂತ ಸಂಪೂರ್ಣವಾಗಿ ಜಾರಿಗೆ ತಂದಿಲ್ಲ, ಇದರಿಂದ ಸರ್ಕಾರಕ್ಕೆ ಭಾರಿ ಲುಕ್ಸಾನಾಗುತ್ತಿದೆ. ಆದರೆ ಈ ದಿವಸ ಕುಡಿತ ಒಂದು ಕಡೆಯಿದೆ; ಒಂದು ಕಡೆ ಇಲ್ಲ. ಆದರೆ ನಮ್ಮಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗುವುದಿಲ್ಲ. ಈ ಮಂತ್ರಿಮಂಡಲವಲ್ಲ, ಆ ಭಗವಂತನೇ ಭೂಮಿಗಿಳಿದು ಬಂದರೂ ಇದು ಇಲ್ಲಿ ಯಶಸ್ವಿಯಾಗುವುದಿಲ್ಲ. ನಾನು ಇದನ್ನು ನನ್ನ ಆತ್ಮ ಬಲದಿಂದ ಹೇಳುತ್ತಿದ್ದೇನೆ. ಈ ದಿವಸ ಕುಡಿತ ಎಲ್ಲೆಲ್ಲಿ ಯಾವಯಾವರೀತಿ ನಡೆಯುತ್ತಿದೆಯೆಂಬುದನ್ನು ಮಂತ್ರಿಗಳು ತಿಳಿದುಕೊಳ್ಳಬೇಕಾಗಿದ್ದರೆ ನಾನು ಮಾನ್ಯ ಮಂತ್ರಿಗಳಿಗೆ ಆಹ್ವಾನ ಕೊಡುತ್ತೇನೆ. ನಾನೂ ಬಟ್ಟೆಯನ್ನು ಬದಲಾಯಿಸಿ ಹಾಕಿಕೊಳ್ಳುತ್ತೇನೆ; ಮಂತ್ರಿಗಳೂ ಬಟ್ಟೆಯನ್ನು ಬದಲಾಯಿಸಿ ಅವರು ನನ್ನ ಜೊತೆಯಲ್ಲಿ ಬರಲಿ, ಆಗ ನಾನು ಅವರಿಗೆ ಇದರ ವಿಚಿತ್ರಹೇಗಿದೆ ಅನ್ನುವುದನ್ನು ತೋರಿಸಿ ಕೊಡುತ್ತೇನೆ. ಪಾನನಿರೋಧದ ಸೋಗಿನಲ್ಲಿ ಸರ್ಕಾರಕ್ಕೆ ವಿಶೇಷ ಹಣ ನಷ್ಟವಾಗುತ್ತದೆ. ಹೀಗೆ ಒಂದು ಕಡೆ ಸರ್ಕಾರಕ್ಕೆ ಸುಲಭವಾಗಿ ಬರುತ್ತಿದ್ದ ವರಮಾನ ಹಾಳಾಗುತ್ತಿರುವಾಗ ಇನ್ನೊಂದು ಕಡೆ ರೈತನ ಮೇಲೆ ನಾನಾ ತರದ ಟ್ಯಾಕ್ಸ್‌ಗಳನ್ನು ಹಾಕಿ ಅತನನ್ನು ಹಿಂಸಿಸಿ ಸಾಯಿಸುತ್ತಿದ್ದೀರಿ.

ಪಾನಪ್ರತಿಬಂಧವು ಕೆಲವು ಕಡೆ ಇದೆ ಕೆಲವು ಕಡೆಯಲ್ಲಿ ಇಲ್ಲ. ಪಾನ ಪ್ರತಿಬಂಧದಿಂದ ಸರಕಾರಕ್ಕೆ ಸಾಕಷ್ಟು ಹಾನಿ ಇದೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನು ತೆಗೆದುಹಾಕಿದರೆ ಸರಕಾರಕ್ಕೆ ಹೆಚ್ಚು ಉತ್ಪನ್ನ ಬರುತ್ತಿತ್ತು. ದೇಶದ ಕಲ್ಯಾಣವಾಗಬೇಕೆಂದೂ ರಾಮರಾಜ್ಯವಾಗಬೇಕೆಂದೂ ಮಹಾತ್ಮಾ ಗಾಂಧೀಜಿಯವರ ಆಶೀರ್ವಾದ ಪಡೆದ ಈ ಕರ್ನಾಟಕ ಮಂತ್ರಿಮಂಡಳವು ಬಡರೈತರಿಗೆ ಕೂಲಿಕಾರರಿಗೆ ಸುಖವಾಗಬೇಕೆಂಬ ಇಚ್ಛೆ ಇದ್ದರೆ ಈ ಪಾನಪ್ರತಿಬಂಧ ಕೂಡಲೇ ತೆಗೆದು ಹಾಕಿರಿ. ಕಾನೂನಿಂದ ನಾವು ಪಾನ ಪ್ರತಿಬಂಧ ಮಾಡುತ್ತೇವೆಂದು ಹೇಳುವುದು ಯುಗಯುಗಾಂತರಗಳಲ್ಲಿಯೂ ಅಶಕ್ಯ. ಏಕಂದರೆ ಇಂಥ ಕಾನೂನಿನ ಪ್ರಕಾರ ನೀನು ಇಂಥ ಗಂಡನನ್ನೇ ಮದುವೆ ಆಗಬೇಕು ಎಂಬ ಕಾನೂನು ಹೆಣ್ಣಿಗೆ, ಇಂಥ ಹೆಂಡತಿಯನ್ನೇ ಮದುವೆ ಆಗಬೇಕೆಂದು ಗಂಡಿಗೆ ಕಾನೂನು ಮಾಡಿದರೆ ಎಷ್ಟು ಹಾಸ್ಯಾಸ್ಪದವೋ ಅಷ್ಟೇ ಹಾಸ್ಯಾಸ್ಪದ ಈ ಪಾನ ಪ್ರತಿಬಂಧದಿಂದ ಆಗುತ್ತದೆ. ಎಲ್ಲಿಯೋ ಕಾಂಗ್ರೆಸ್ಸಿನ ಬಾಲಬಡಿಯುವ ನಾಲ್ಕು ಪೇಪರುಗಳಲ್ಲಿ ಪಾನ ಪ್ರತಿಬಂಧವು ಯಶಸ್ವಿಯಾಗಿದೆಂದು ದೊಡ್ಡ ಅಕ್ಷರಗಳಲ್ಲಿ ಮುಖಪುಟದಲ್ಲಿ ಮುದ್ರಿಸಿದರೆ ಪಾನ ಪ್ರತಿಬಂಧವು ಫಲಕಾರಿಯಾಗಲಾರದು. ಇದಕ್ಕೆ ಮಾನವರ ನೈತಿಕ ಬಲಬೇಕು, ಬೆಂಬಲಬೇಕು. ಮಾನ್ಯ ಮಂತ್ರಿಗಳು ಶಾಸ್ತ್ರ, ಪುರಾಣ, ವೇದ, ಆಗಮನ ಓದಿ ನೋಡಲಿ, ಈ ಸುರಾಪಾನ ಪೂರ್ವ ಕಾಲದಿಂದಲೇ ಬಂದಿರುತ್ತದೆ. ದೇವತೆಗಳ ಕಾಲದಿಂದ ಬಂದ ಈ ಸುರಾಪಾನವು ಕಾನೂನಿಂದ ಯಶಸ್ವಿ ಆಗುವುದಿಲ್ಲ. ಈ ಮಾತು ನಾನು ಆಹ್ವಾನ ಕೊಟ್ಟು ಹೇಳುತ್ತೇನೆ; ಆದಕಾರಣ ಇದನ್ನು ತೆಗೆದುಹಾಕಿರಿ. ಸರಕಾರಕ್ಕೆ ಬರುವ ಅಳತಪ್ಪಿದ ಆದಾಯನನ್ನು ಕಳೆದುಕೊಂಡು ಮಾತಿನ ಹಟಕ್ಕಾಗಿ ಪಾನ ಪ್ರತಿಬಂಧ ಮಾಡಿ ಬಡರೈತ ಕೂಲಿಕಾರರಮೇಲೆ ಹೆಚ್ಚಿನ ಕರ ಭಾರ ಹಾಕುವುದು ಈ ಕರ್ನಾಟಕ ರಾಜ್ಯಕ್ಕೆ ಭೂಷಣವೂ ಅಲ್ಲ, ಉಚಿತವೂ ಅಲ್ಲ. ಟರ್ನ್‌ಓವ್ಹರ್ ಟ್ಯಾಕ್ಸ್ ಇದಂತೂ ಬಹು ವಿಚಿತ್ರ. ಸರಕಾರವೇ ಕುಳಿತು ವ್ಯಾಪಾರಸ್ಥರಿಗೆ ಕಳ್ಳತನ ಕಲಿಸುತ್ತದೆ. ಇದನ್ನು ಮೊದಲು ತೆಗೆದುಹಾಕಬೇಕು; ಮತ್ತು ವ್ಯಾಪಾರಸ್ಥರಿಗೆ ಅನ್ಯಾಯವಾಗುವ ಕೆಲವು ಸೂಚನೆಗಳನ್ನು ತಮ್ಮ ಮುಂದೆ ಇಡುತ್ತೇನೆ. ಇವುಗಳನ್ನು ಅಮಲಿನಲ್ಲಿ ತರಲಿಕ್ಕೇಬೇಕು.

೧. ಸೆಕ್ಸನ್ 5 (7) ಇದನ್ನು ತೆಗೆದುಹಾಕತಕ್ಕದ್ದು; ಏಕೆಂದರೆ ಪ್ರತಿತಿಂಗಳ ವ್ಯವಹಾರದ ಅಂದಾಜು ಮಾಡುವುದು ಆಗುವುದಿಲ್ಲ. ಅಥವಾ ರಿಟರ್ನ್ ಕೊಡುವುದೂ ಆಗುವುದಿಲ್ಲ ಮತ್ತು ಪ್ರತಿ ತಿಂಗಳ ಕರಾಕರಣಿ ಮಾಡುವುದೂ ಆಗುವುದಿಲ್ಲ; ಇದನ್ನು ತೆಗೆಯಬೇಕು.

೨. ಸೆಕ್ಷನ್ 12ರಲ್ಲಿ ಮುಂಬಯಿ ಮಾರಾಟಕರ ಕಾಯದೆಯಲ್ಲಿ ಇದ್ದಂತೆ ವ್ಯಾಪಾರಸ್ಥರು ರಿಟರ್ನ್ ಸಲ್ಲಿಸುವ ಸಮಯದಲ್ಲಿ ಕರತುಂಬಿ ಚಲನ್ ಇಡುವ ಮಾತನ್ನು ಸೇರಿಸಬೇಕು. ಹಾಗೂ ಮೊದಲು ಸಲ್ಲಿಸಿದ ರಿಟರ್ನಿನಲ್ಲಿ ತಪ್ಪು ತಡಿಗಳನ್ನು ತಿದ್ದಿ ಎರಡನೆಯ ರಿಟರ್ನ್ ಕೊಡಲು ಅವಕಾಶವಿರಬೇಕು.

೩. ಕಮೀಷನರ್ ಹಾಗೂ ಅಪಲೇಟ್ ಟ್ರಿಬ್ಯೂನಲ್ ನಡುವೆ ಮೇಲಾಟ ಹಚ್ಚುವ ಮಾತು ಈ ಕಾಯಿದೆಯಲ್ಲಿ ಇರಬಾರದಾಗಿತ್ತು. ಡೆಪ್ಯೂಟಿ ಕಮೀಷನರ್ ವಿರುದ್ಧ ಟ್ರಿಬ್ಯೂನಲ್ಲಿಗಷ್ಟೇ ಹೋಗಲು ಅವಕಾಶವಿರಬೇಕು. ಕಮೀಷನರ್ ಅವರಿಗೆ ರಿವಿಜನ್ ಅಧಿಕಾರ ಕೊಡುವದೆಂದರೆ ಲಂಚದ ಹಾದಿ, ನಿಮ್ಮ ಮಾತಿನಲ್ಲಿ ಹೇಳುವದಾದರೆ ''ಸಂಭಾವನೆಯ ಮಾರ್ಗ'' ಮಾಡಿ ಕೊಟ್ಟಂತೆ ಸರಿ.

ನನಗೆ ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ಸ್ವಾಮಿ, ಈ ಮಾರಾಟ ತೆರಿಗೆಯ ಮಸೂದೆಯ ವಿಷಯದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ವಿವರವಾಗಿ ವಿಷಯಗಳನ್ನು ತೆಗೆದುಕೊಂಡು ಹೇಳುವುದಕ್ಕೆ ನಾನು ಹೋಗುವುದಿಲ್ಲ. ನನ್ನ ಅಭಿಪ್ರಾಯವನ್ನು ಈ ಮಸೂದೆಯ ಬಗ್ಗೆ ಸ್ಥೂಲವಾಗಿ ಹೇಳುತ್ತೇನೆ. ದೇಶಕ್ಕೆ ಸ್ವಾತಂತ್ರ್ಯವು ಬಂದು ಹತ್ತು ವರ್ಷಗಳಾದುವು. ಈ ಹತ್ತು ವರ್ಷ ಕಾಂಗ್ರೆಸು ರಾಜ್ಯಭಾರ ನಡೆಸಿದೆ. ವರ್ಷೇ, ವರ್ಷೇ ತೆರಿಗೆಯು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಹೆಚ್ಚಾಗುತ್ತಲೇ ಇದೆ. ಪಾನ ನಿರೋಧವನ್ನು ಜಾರಿಗೆ ತಂದದ್ದು ಸರಿಯಾದ ಕೆಲಸವಾಗಿಲ್ಲ. ಸರಕಾರಕ್ಕೆ ಬರುವ ಆದಾಯ ಹೋಗಿದೆ. ಪಾನ ನಿರೋಧವೂ ಅರ್ಧಂಭರ್ಧವಾಗಿ ಜಾರಿಯಲ್ಲಿ ಬಂದಿದೆ. ಬರುವ ವರಮಾನವು ಸರಕಾರಕ್ಕೆ ಬರುವುದಿಲ್ಲ. ಈಗ ಮಾರಾಟ ತೆರಿಗೆಯ ಭಾರವನ್ನು ಜನತೆಯು ಹೊರುವುದಕ್ಕೆ ಖಂಡಿತ ಸಾಧ್ಯವಿಲ್ಲ ಎಂದು ನನಗೆ ಎನಿಸುತ್ತದೆ. ಜನಸಾಮಾನ್ಯರ ಜೀವನಾವಶ್ಯಕ ವಸ್ತುಗಳ ಮೇಲೆ ತೆರಿಗೆ ವಿಧಿಸಲಾಗಿದೆ. ಎಲ್ಲರಿಗೂ ಬೇಕಾಗಿರತಕ್ಕ ಮೆಣಸಿನಕಾಯಿಯ ಮೇಲೆ ತೆರಿಗೆ ಹಾಕಿದ್ದು ಸರಿಯಲ್ಲ. ಖಾರ ಜಾಸ್ತಿ ತಿಂದರೆ ಕೋಪ ಬರುತ್ತದೆಂದು ಮೆಣಸಿನಕಾಯಿಯ ಮೇಲೆ ಕರ ಹಾಕಿ ಜಾಸ್ತಿ ತಿನ್ನದಂತೆ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರುವರೋ ಏನೋ ಎಂದು ನನಗೆ ಎನಿಸುತ್ತದೆ.

(ಶ್ರೀ ಎಂ. ಲಿಂಗೇಗೌಡ)

ಹೆಂಡ ಕುಡಿಯಬಾರದು ಎಂದು ಪಾನನಿರೋಧವನ್ನು ಕೆಲವು ಸ್ಥಳಗಳಲ್ಲಿ ಜಾರಿಗೆ ತಂದಿದ್ದಾರೆ. ಆದರೆ ಷೆಡ್ಯೂಲ್ ನೋಡಿದರೆ ಹೆಂಡದ ಮೇಲೆ ತೆರಿಗೆ ವಿಧಿಸಿಲ್ಲ. ಉಳಿದ ಸರಾಯಿಗಳ ಮೇಲೆ ತೆರಿಗೆ ಹಾಕಿದಂತೆ ಹೆಂಡದಮೇಲೆ ತೆರಿಗೆ ಹಾಕದೆ ಇರುವುದರಿಂದ ಕುಡಿಯುವುದಕ್ಕೆ ಉತ್ತೇಜನ ಕೊಟ್ಟಂತಾಗುವದಿಲ್ಲವೆ? ಇದು ಯಾವ ಧರ್ಮ?

ಶ್ರೀ ಟಿ. ಮರಿಯಪ್ಪ.—ಈಗ ಎಲ್ಲಾ ಲಿಕರ್ಸ್ ಮೇಲೆ ತೆರಿಗೆ ಹಾಕಿದೆ. ಹೆಂಡದ ಮೇಲೆ ಮೊದಲೂ ತೆರಿಗೆ ಇದ್ದಿರಲಿಲ್ಲ. ಈಗಲೂ ತೆರಿಗೆ ಹಾಕಿಲ್ಲ. ನೆರೆಹೊರೆಯ ಪ್ರಾಂತಗಳಲ್ಲಿ ತೆರಿಗೆ ಹಾಕಿಲ್ಲ. All liquors including toddy have been exempted in old law. Now except toddy, foreign made liquor, country liquor, etc., have been taxed for the first time. If the House agrees, I have no objection even to tax that also today.

ಶ್ರೀ ಎಂ. ಲಿಂಗೇಗೌಡ.—ನಾನು ಮೊದಲೇ ಹೇಳಿದ್ದೇನೆ ಸ್ವಾಮಿ, ನಮ್ಮ ಅರ್ಥಸಚಿವರು ಬಹಳ ಜಾಣರು. ತೆರಿಗೆಯ ವಿಷಯದಲ್ಲಿ ಜನರಿಗೆ ಯಾವ ರೀತಿಯಾಗಿ ಮೋಸಮಾಡಿ ನಂಬಿಕೆಯನ್ನುಂಟು ಮಾಡಬೇಕೆಂಬುದನ್ನು ಅವರು ಚೆನ್ನಾಗಿ ತಿಳಿದವರಾಗಿದ್ದಾರೆ. ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಎಲ್ಲರೂ ಹೇಳುತ್ತಾರೆ. ಹೆಂಡ ಕುಡಿಯುವುದನ್ನು ಬಿಟ್ಟುಬಿಡಿ ಎಂದು ಹೇಳಿದರೆ ಅದು ಸಾಧ್ಯವೇ? ಸುರಾಪಾನ ಅಂದರೆ ಮದ್ಯ ದೇವತೆಗಳೂ ಸಹ ಕುಡಿಯುತ್ತಿದ್ದರು ಎಂದು ಒಬ್ಬ ಸದಸ್ಯರು ಹೇಳಿದರು. ಬ್ರ್ಯಾಂಡಿ ಬೀರು ಯಾವುದೂ ಸಿಕ್ಕದೇ ಇದ್ದರೂ ಕಳ್ಳಭಟ್ಟಿ ಸರಾಯಿಯನ್ನು ಕುಡಿಯುತ್ತಾರೆ. ಕಳ್ಳಭಟ್ಟಿ ಸರಾಯಿ ಕುಡಿಯುವುದು ಎಂದರೆ ವಿಷಪಾನ ಮಾಡಿದ ಹಾಗೆ ಇದೆ. ಇಲ್ಲಿ ಸಿಟ್‌ಲಿಕರ್ ತಯಾರಮಾಡಿ ಕುಡಿಯುವುದನ್ನು ನಿಲ್ಲಿಸಲು ಸಾಧ್ಯವಾಗಿಲ್ಲ. ಆದಕಾರಣ ಈ ಮದ್ಯಪಾನ ನಿರೋಧವನ್ನು ಸಂಪೂರ್ಣವಾಗಿ ತೆಗೆದುಹಾಕಿಬಿಡಬೇಕೆಂದು ನಾವು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇವೆ. ನೆರೆಯ ಪ್ರಾಂತವಾದ ಆಂಧ್ರದಲ್ಲಿ ತೆರಿಗೆ ಹಾಕಿಲ್ಲವೆಂದು ಹೇಳುವ ವಾದವು ಖಂಡಿತವಾಗಿ ಸರಿಯಾದುದಲ್ಲ. ಈ ಕಾರಣದಿಂದ

5 P. M.

ನಾನು ಹೇಳುತ್ತೇನೆ. ಖಂಡಿತವಾಗಿಯೂ ಜನರು ಈ ತೆರಿಗೆಯ ಹೊರೆಯನ್ನು ಹೊರುವುದಕ್ಕಾಗುವುದಿಲ್ಲ. ಮಾರಾಟ ತೆರಿಗೆಯನ್ನು ಎಲ್ಲರೂ ಕೊಡಬೇಕಾಗುತ್ತದೆ. ದೇಶದ ಮೂಲೆ ಮೂಲೆಯಲ್ಲಿರುವ ರೈತರೂ ಬಡವರೂ ಕೂಲಿಗಾರರೂ ಎಲ್ಲರೂ ಕೊಡಬೇಕು. ಬಡಜನರಿರುವ ದೇಶದಲ್ಲಿ ಅವರ ಬೆನ್ನು ಮೂಳೆಯನ್ನು ಮುರಿಯುವುದು ಸರಿಯಲ್ಲ. ಇದನ್ನು ಖಂಡಿತವಾಗಿ ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಬಿ. ಎಲ್ ನಾರಾಯಣಸ್ವಾಮಿ (ಮುಳಬಾಗಿಲು).—ಸ್ವಾಮಿ, ಈ ಮಸೂದಾ ಕಾನೂನು ಈಗಾಗಲೇ ವಿಪುಲವಾಗಿ ಚರ್ಚೆಯಾಗಿದೆಯೆಂದು ಮಾನ್ಯ ಮಂತ್ರಿವರ್ಯರು ಹೇಳಿದ್ದಾರೆ. ಅಂದಮೇಲೆ ಇದರಲ್ಲಿರುವ ಲೋಪದೋಷಗಳು ಚೆನ್ನಾಗಿ ಅವರ ದೃಷ್ಟಿಗೆ ಬಂದಿರಬೇಕು. ಇದನ್ನು ಸಾಮಾನ್ಯ ಜನತೆ ನೋಡಿದರೆ, ಸರ್ಕಾರದ ಆಡಳಿತದ ಮಟ್ಟ ಯಾವ ರೀತಿ ಇದೆ, ಆಡಳಿತದಲ್ಲಿ ದಕ್ಷತೆ ಯಾವ ಮಟ್ಟದಲ್ಲಿದೆ ಎಂಬುದು ಅವರಿಗೆ ಚೆನ್ನಾಗಿ ತಿಳಿಯುತ್ತದೆ. ನಾವಾದರೂ ಸರ್ಕಾರ ಇಂಥಾ ಒಂದು ಹೀನಸ್ಥಿತಿಗೆ ಬಂತಲ್ಲಾ ಎಂದು ವ್ಯಥೆ ಪಡಬೇಕಾಗಿದೆ. ಸಮಾಜಕ್ಕೆ ತ್ಯಾಜ್ಯವಾದ ಹೆಂಡವನ್ನು ಕುಡಿಯುವುದಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ಕೊಟ್ಟು ತಮ್ಮ ಕಾರ್ಯವನ್ನು ಸಮರ್ಥಿಸುವ ನೀತಿ ಗಾಂಧೀವಾದವನ್ನವಲಂಬಿಸಿದ್ದ ಕಾಂಗ್ರೆಸ್‌ಗೆ ಏಕೆ ಬಂತು ಎಂದು ವ್ಯಸನವಾಗುತ್ತದೆ. ಇಂಥಾ ನೀತಿಯನ್ನು ಪುಷ್ಟೀಕರಿಸುವುದಕ್ಕೆ ನಾವು ತಯಾರಾಗಿಲ್ಲ. ದೇಶದಲ್ಲಿರುವ ಹೆಚ್ಚು ಬಡಜನರ ಸೌಖ್ಯ ಸಾಧನೆಯೇ ತಮ್ಮ ಧ್ಯೇಯವೆಂದು ಹೇಳಿ ಆ ಜನರ ನಿತ್ಯ ಬಳಕೆಯ ಪದಾರ್ಥಗಳ ಮೇಲೆ ಒಂದಲ್ಲ ಒಂದು ತೆರಿಗೆಯನ್ನು ಹೇರಿಸುವ ನೀತಿಯನ್ನು ಯಾವ ರೀತಿಯಲ್ಲಿಯೂ ಯಾರೂ ಒಪ್ಪುವುದಿಲ್ಲ; ಮತ್ತು ಇಂಥ ಒಂದು ತೆರಿಗೆಯನ್ನು ಹಾಕಬೇಕಾದ ಪ್ರಮೇಯವಿದೆಯೆ, ಇದನ್ನು ವಿಧಿಸದೆ ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲವೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ಮಾರಾಟ ತೆರಿಗೆಯನ್ನು ಹಾಕದೆ ಆಡಳಿತ ನಡೆಸಲು ಸಾಧ್ಯವಿದೆ, ಆದರೆ ಮಂತ್ರಿಗಳು ಆ ದಿಕ್ಕಿನಲ್ಲಿ ಯೋಚನೆ ಮಾಡಿಲ್ಲ. ಮುಂದಾದರೂ ಯೋಚಿಸುತ್ತಾರೆಂದು ನಂಬಿದ್ದೇನೆ. ಮುಖ್ಯವಾಗಿ ಖರ್ಚು ಬಾಬುಗಳನ್ನು ಕಡಮೆ ಮಾಡುವುದಕ್ಕೆ ಬಹಳ ಅವಕಾಶವಿದೆ. ಈ ಬಗ್ಗೆ ಅನೇಕ ಸಲಹೆಗಳನ್ನು ಈ ಸಭೆಯಲ್ಲಿಯೇ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವುಗಳನ್ನೆಲ್ಲಾ ಕಾರ್ಯರೂಪಕ್ಕೆ ತರುವುದಾದರೆ ಈ ತೆರಿಗೆಯನ್ನು ಹಾಕುವ ಪ್ರಮೇಯವೇ ಇರುವುದಿಲ್ಲ. ಹಾಗಿರುವಾಗ ಏಕೆ ಸರ್ಕಾರ ಇಂಥಾ ಕಾರ್ಯಕ್ರಮವನ್ನು ಕೈಗೊಳ್ಳುವುದಿಲ್ಲ? ನಿಜವಾಗಿಯೂ ಹಾಗೆ ಮಾಡಿದರೆ ಇವರನ್ನು ದೇಶ ಕೊಂಡಾಡುತ್ತದೆಯೇ ವಿನಾ ಇಂಥಾ ತೆರಿಗೆ ಹಾಕಿದರೆ ಕೊಂಡಾಡುವುದಿಲ್ಲ.

ಈ ಮಸೂದೆಯ ಮೇಲೆ ವಿಪುಲವಾಗಿ ಚರ್ಚೆ ನಡೆದಿರುವುದರಿಂದ ನಾನು ಹೆಚ್ಚು ಟೀಕೆ ಮಾಡಲಿಚ್ಛಿಸುವುದಿಲ್ಲ. ಹೊಸದಾಗಿ ಇಂಥಾ ಒಂದು ಮಸೂದಾ ಕಾನೂನನ್ನು ತಂದಿದ್ದರೆ ಖಂಡಿತವಾಗಿ ಇದನ್ನು ವಾಪಸು ತೆಗೆದುಕೊಳ್ಳಿ ಎಂದು ಪ್ರಾರ್ಥನೆ ಮಾಡುತ್ತಿದ್ದೆ. ಆದರೆ ಹಿಂದೆ ಇಂಥಾ ಒಂದು ಕಾನೂನ ಜಾರಿಯಲ್ಲಿತ್ತು, ಈ ಮಸೂದಾ ಕಾನೂನು ಸೆಲೆಕ್ಟ್ ಕಮಿಟಿಯಿಂದ ಪರಿಶೀಲನೆಯಾಗಿ ಬಂದಿದೆ. ಇಂಥಾ ಸಂದರ್ಭದಲ್ಲಿ ಇದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುವುದು ಕಷ್ಟವಾಗಿದೆ. ಅವರ ಸ್ನೇಹಿತನಾಗಿ ಹಿತಚಿಂತಕನಾಗಿ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ವಿನಾಯಿತಿ ಪಟ್ಟಿಯಲ್ಲಿ ಸಾಮಾನ್ಯ ಜನರು ನಿತ್ಯ ಉಪಯೋಗಿಸುವ ಅನೇಕ ಪದಾರ್ಥಗಳು ಬಿಟ್ಟುಹೋಗಿವೆ. ಸೀಮೆಎಣ್ಣೆ ಸಾಮಾನ್ಯ ಜನರು, ಬಡವರು ಉಪಯೋಗಿಸುವ ಪದಾರ್ಥ.

[MR. SPEAKER in the Chair]

ಹೆಚ್ಚು ಜನರು ಇದನ್ನುಪಯೋಗಿಸುವುದಿಲ್ಲ, ಹೆಚ್ಚು ತೆರಿಗೆ ಕೊಟ್ಟಂತಾಗುವುದಿಲ್ಲ. ಏಕೆ ಇದಕ್ಕೆ ವಿನಾಯಿತಿ ಕೊಡಬೇಕೆಂದು ಹೇಳಿದರು. ಹೆಚ್ಚು ತೆರಿಗೆ ಹಾಕದೆ ಆಡಳಿತ ನಡೆಸುವುದು ಕಷ್ಟ ಎನ್ನುವ ವಾದವಿದೆ. ಹೀಗೆ ತಪ್ಪು ಮಾಡಿ ಅದನ್ನೇ ಸಮರ್ಥಿಸುವುದು ಯಾವ ನೀತಿ? ಈ ಕಾರಣದಿಂದ ಸೀಮೆಎಣ್ಣೆಗೆ ತೆರಿಗೆ ಹಾಕಿ ಅನೇಕ ಬಡಜನರಿಂದ ವಸೂಲು ಮಾಡುವುದೆಂದರೆ ನಮ್ಮ ಸರ್ಕಾರ ಯಾವ ಮಟ್ಟಕ್ಕಿಳಿದಿದೆ

ಯೆಂಬುದನ್ನು ಯೋಚಿಸಬೇಕು. ಬಡ ಕುಟುಂಬಗಳ ಮೇಲೆ ಈ ಹೊರೆಯನ್ನು ಹೊರಿಸುವುದು ದಕ್ಷತೆಯ ದಿವಾಳಿತನವನ್ನು ತೋರಿಸುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಈ ತೆರಿಗೆ ಅನಾವಶ್ಯಕವೆಂದು ಕಾಣುತ್ತದೆ. ಇನ್ನು ಮುಂದೆ ಅಂಥಾ ಕೆಟ್ಟ ಪರಿಸ್ಥಿತಿ ಬಂದರೆ ಆಗ ಹಾಕಬಹುದು. ಈಗ ಅಂಥ ದಿವಾಳಿತನ ಬಂದಿಲ್ಲ.

ಶ್ರೀ ಟಿ. ಮರಿಯಪ್ಪ.—ಇದೇನೂ ಹೊಸ ತೆರಿಗೆಯಲ್ಲ. ಮೈಸೂರು, ಮದರಾಸು, ಬೊಂಬಾಯಿ ಈ ಪ್ರದೇಶಗಳಲ್ಲಿರುವುದನ್ನು ಸಮನ್ವಯಗೊಳಿಸುತ್ತಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನಮ್ಮ ನೆರೆ ಹೊರೆಯ ಪ್ರಾಂತಗಳು ತಪ್ಪು ಮಾಡಿದರೆ, ನಾವೇಕೆ ಅದನ್ನನುಕರಿಸಬೇಕು ?

ಶ್ರೀ ಟಿ. ಮರಿಯಪ್ಪ.—ಇತರ ಎಲ್ಲ ಪ್ರಾಂತಗಳಲ್ಲಿಯೂ ಇದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನಮ್ಮ ಸರ್ಕಾರಕ್ಕೆ ಒಳ್ಳೆಯ ಕೀರ್ತಿ ಬರಲಿ, ಇನ್ನೊಬ್ಬರು ತಪ್ಪು ಮಾಡಿವರೆ ನಾವೂ ಮಾಡಬೇಕೆಂಬುದು ಒಳ್ಳೆಯ ನೀತಿಯಲ್ಲವೆಂಬುದು ನನ್ನ ಅಭಿಪ್ರಾಯ. ಸೀಮೆ ಎಣ್ಣೆ, ಕಾಫಿಬೀಜ, ಟೀ, ಸಕ್ಕರೆ ಇವೆಲ್ಲವೂ ತಿನ್ನುವ ಪದಾರ್ಥಗಳು. ಹಾಗೆಯೇ ಮೆಣಸಿನಕಾಯಿ, ಅಡಕೆ, ಮೆಣಸು, ಆಲೂಗಡ್ಡೆ, ಬೆಳ್ಳುಳ್ಳಿ, ಈರುಳ್ಳಿ ಇವೆಲ್ಲ ಪದಾರ್ಥಗಳೂ ತಿನ್ನುವ ಪದಾರ್ಥಗಳು. ಇಂಥಾ ಆಹಾರ ಪದಾರ್ಥಗಳಿಗೆ ಯಾವ ರೂಪದಲ್ಲಿಯೂ ತೆರಿಗೆ ಹಾಕಬಾರದು. ಇದಕ್ಕೆಲ್ಲಾ ವಿನಾಯಿತಿ ಕೊಟ್ಟರೆ ಸ್ವಾಗತಿಸಬಹುದು, ಇಲ್ಲದಿದ್ದರೆ ಇದನ್ನು ಸಂಪೂರ್ಣವಾಗಿ ವಿರೋಧಿಸಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಇದರ ಮೇಲೆ ಸಾಕಷ್ಟು ಚರ್ಚೆಯಾಗಿರುವುದರಿಂದ, ಚರ್ಚೆಯನ್ನು ಇಲ್ಲಿಗೇ ಮುಕ್ತಾಯ ಮಾಡಬಹುದೆಂದು colsure motion ಸೂಚನೆ ಮಾಡುತ್ತೇನೆ.

ಒಬ್ಬ ಸದಸ್ಯರು.—ಸ್ವಾಮಿ, ಒಂದು ವಿಚಾರವನ್ನು ತಿಳಿಯಬೇಕಾಗಿದೆ. ಶ್ರೀಮಾನ್ ರೇವಣ್ಣಸಿದ್ದಪ್ಪನವರು ಮಾತನಾಡಬಹುದೆಂದು ತಾವು ಹೇಳಿದಮೇಲೆ closure motion ಬಗ್ಗೆ ಮಾತನಾಡುತ್ತಿದ್ದಾರೆ. ಹೀಗೆ ಮಾಡಬಹುದೇ ?

ಅಧ್ಯಕ್ಷರು.—ಅವರು ಮಾತನಾಡಿದ ಮೇಲೆ ಇವರ ಸೂಚನೆಗೆ ಅವಕಾಶಕೊಡುತ್ತೇನೆ. ಅವರು ಮಾತನಾಡುವುದಕ್ಕೆ ಇನ್ನೂ ಪ್ರಾರಂಭಿಸಿಲ್ಲ. ಈಗ ಸೂಚನೆ ಮಾಡಿದ್ದಾರೆ. I have to give him leave. ಆಮೇಲೆ ಕೊಡುತ್ತೇನೆ.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈ ತೆರಿಗೆಯ ವಿಷಯವನ್ನು ನೋಡಿದರೆ, ತಲೆಗೆಲ್ಲಾ ಒಂದೇ ಮಂತ್ರ ಎಂಬುದು ಎದ್ದುಕಾಣುತ್ತದೆ. ಸಾಮಾನ್ಯವಾಗಿ ತೆರಿಗೆಯನ್ನು ವಸೂಲು ಮಾಡಬೇಕಾದರೆ ಯಾವ ಮನುಷ್ಯನಿಗೆ ಕೊಡುವ ಶಕ್ತಿ ಇದೆಯೋ ಯಾರಲ್ಲಿ ಪುಷ್ಕಳವಾಗಿ ಧನವಿದೆಯೋ ಅವರಿಂದ ವಸೂಲುಮಾಡುವುದು ನ್ಯಾಯ. ಆದರೆ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳಿ, ಯಾವುಯಾವುದೋ ಕಾರಣದಿಂದ ಇದ್ದ ಹಣವನ್ನು ಅಪವ್ಯಯಮಾಡಿ, ಪ್ರತಿ ವರ್ಷವೂ ಬಡ್ಜೆಟ್ ಅಧಿವೇಶನ ಬಂತೆಂದರೆ ಪ್ರಪಂಚದಲ್ಲಿರುವ ಪ್ರತಿಯೊಂದು ಸಾಮಾನಿನ ಮೇಲೂ ತೆರಿಗೆ ಹಾಕುವುದನ್ನು ನೋಡಿದರೆ ನಿಜವಾಗಿಯೂ, ಡಾ|| ಪಾರ್ಥಸಾರಥಿಯವರು ಹೇಳಿದ ಹಾಗೆ, ಇದು ತಲೆಗಂದಾಯಕ್ಕೆ ಸರಿದೂಗುತ್ತದೆಂದು ಕಾಣುತ್ತದೆ. ಸಾಮಾನ್ಯವಾಗಿ ಹಿಂದೆ ಮೈಸೂರು ರಾಜ್ಯ ರಾಮರಾಜ್ಯ, ಮಾದರಿ ಸಂಸ್ಥಾನವೆಂದು ಹೇಳುತ್ತಿದ್ದಾಗ ಕೇವಲ ನಾಲ್ಕು ಕೋಟಿ ರೂಪಾಯಿ ಉತ್ಪತ್ತಿ ಇದ್ದಾಗ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದರು, ಅನೇಕ ಕೆರೆಗಳನ್ನು ಜಲಾಶಯಗಳನ್ನೂ ಕಟ್ಟಿಸಿದರು. ಯಾರೋ ದರೋಡೆಕೋರರು ನಮ್ಮ ಜನರ ಹಣವನ್ನು ದೋಚುತ್ತಿದ್ದಾರೆಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾಗ ಆಗಿನ ಸರ್ಕಾರ ಎಷ್ಟೋ ಕೆಲಸಗಳನ್ನು ಮಾಡಿ ಕೋಟ್ಯಾಂತರ ರೂಪಾಯಿ ಕೂಡಿಸಿಟ್ಟಿದ್ದರು. ಆಗ ಕೇವಲ ನಾಲ್ಕು ಕೋಟಿ ರೂಪಾಯಿ ಉತ್ಪತ್ತಿ ಇತ್ತು. ಈ ಹೊತ್ತು ಅದು ಅದು 40ಕೋಟಿ ರೂಪಾಯಿ ಆಗಿದೆ. ನಿಜವಾಗಿ ಹಳ್ಳಿಗಳಿಗೆ ಹೋಗಿ ರೈತನಿಗೆ ಯಾವುದಾದರೂ ಸಹಾಯವಾಗಿದೆಯೆ ಎಂದು ನೋಡಿದರೆ ಆಗ ಗೊತ್ತಾಗುತ್ತದೆ. ಮಂತ್ರಿಗಳು ಬೆಂಗಳೂರಿನಲ್ಲಿ ಕುಳಿತುಕೊಂಡು ರಾಜ್ಯಭಾರ ಮಾಡುತ್ತಿದ್ದಾರೆ, ಅವರಿಗೆ ಗೊತ್ತಾಗುವುದಿಲ್ಲ. ಯಾವುದಾದರೂ ವೇಷದಿಂದ ಇವರು ಹೋಗಿ ನೋಡಿದರೆ ನಿಜಸ್ಥಿತಿ ಗೊತ್ತಾಗುತ್ತದೆ. ಅವರು ಹೀಗೆ ಮಾಡಿದರೆ, ಏನು ಮರ್ಯಾದೆಯ ವಾಕ್ಯಗಳು ಸಾಮಾನ್ಯ ಜನರ ಬಾಯಿನಿಂದ ಬರುತ್ತವೆ ಎಂಬುದು ಗೊತ್ತಾಗುತ್ತದೆ. ಈಗ 36 ಕೋಟಿ ರೂಪಾಯಿಗಳಷ್ಟು ರಿಜರ್ವ್‌ಫಂಡ್ ಇದ್ದುದನ್ನು ಪೂರ್ತಿ ಖರ್ಚುಮಾಡಿ 80 ಕೋಟಿ ರೂಪಾಯಿಗಳ ಮೇಲ್ಪಟ್ಟು ಸಾಲಮಾಡಿದ್ದಾರೆ ಎಂದು ಹೇಳುತ್ತಾರೆ. ಇವೊತ್ತು ಪ್ರತಿಯೊಬ್ಬ ಮನುಷ್ಯನು ಸಾಯುವಾಗ ಹೆಣದಮೇಲೆ ಹಾಕುವ ಬಟ್ಟೆಯ ಮೇಲೂ ಸುಂಕಹಾಕಿದ್ದಾರೆ. ಸೀಮೆಎಣ್ಣೆ, ಬೆಂಕಿಕಡ್ಡಿ ಹೀಗೆ ಕೆಲವು ನಿಜವಾಗಿ ಮನುಷ್ಯನ ನಿತ್ಯ ಜೀವನಕ್ಕೆ ಅವಶ್ಯಕವಾಗಿರುವ ಮತ್ತು ಇತರೇ ಆಹಾರ ಪದಾರ್ಥಗಳ ಮೇಲೂ ಸುಂಕಹಾಕಿದ್ದಾರೆ. ಮಾನ್ಯಮಂತ್ರಿಗಳು ಹೊಸದಾಗಿ ಯಾವುದಕ್ಕೂ ಹಾಕಿಲ್ಲ ಎಂದು ಹೇಳಿದರು. ತೆಂಗಿನಕಾಯಿ, ಕೊಬ್ಬರಿ ಮುಂತಾದುವುಗಳ ಮೇಲೂ ತೆರಿಗೆ ಹಾಕಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಈ ಪದಾರ್ಥಗಳ ಮೇಲೆ ಪಕ್ಕದ ಪ್ರದೇಶಗಳಲ್ಲಿ ತೆರಿಗೆ ಇತ್ತು. ಈಗ ಎಲ್ಲಾ ಐದು ಭಾಗಗಳಿಗೂ ಬಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರತಿಯೊಂದಕ್ಕೂ ಟ್ಯಾಕ್ಸ್ ಹಾಕುವುದರಿಂದ ಟ್ಯಾಕ್ಸ್ ಮಿನಿಸ್ಟರ್ ಎಂದು ಚರಿತ್ರೆಯಲ್ಲಿ ಹೊಸದಾಗಿ ಒಂದು ಹೆಸರು ಬರುತ್ತದೆ.

ಶ್ರೀ ಟಿ. ಮರಿಯಪ್ಪ.—ನಾವು ನಿಮ್ಮ ಕೈಯಲ್ಲಿ ಮಾತುಗಳನ್ನು ಕೇಳಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತೆಂಗಿನಕಾಯಿಯ ವಿಷಯ. ತೆಂಗಿನ ಗಿಡಗಳು ಮೊದಲು ಆರು ತಿಂಗಳು ಮೊಳಕೆಮಾಡಿ ಹತ್ತು ವರ್ಷ ಬೆಳೆಸಿದ ಮೇಲೆ ಸುಮಾರು 20 ವರ್ಷಗಳಿಗೆ ಮೇಲ್ಪಟ್ಟು ಬೆಳೆಕೊಡುತ್ತವೆ ಅಂತಹ ತೆಂಗಿನಕಾಯಿಗಳಿಗೆ ಟ್ಯಾಕ್ಸ್ ಹಾಕಿದರೆ ಹೇಗೆ ? ಒಬ್ಬ ಮನುಷ್ಯನಿಗೆ ಟ್ಯಾಕ್ಸ್ ಹಾಕಬೇಕಾದರೆ ಅವನ ಜಮೀನಿನಲ್ಲಿ ತೆರಿಗೆ ಕೊಡುವಷ್ಟು ಉತ್ಪತ್ತಿ ಬರುತ್ತದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಒಂದು ವೇಳೆ ರೈತ ಅಷ್ಟು ಉತ್ಪತ್ತಿ ಬರುವುದಿಲ್ಲ ಎಂದು ಹೇಳಿದರೆ ಆಗ ಸರ್ಕಾರ ಅವನಿಗೆ ಬೆಳೆಯಲಾಗಿರುವ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ಸಿದ್ಧವಾಗಿರಬೇಕು. ಈ ವರ್ಷ ಹತ್ತು ಸಾವಿರ ರೂಪಾಯಿಗಳ ಆದಾಯ ಆಗಿರಬೇಕು ಎಂದು ಸರ್ಕಾರದವರು ಹೇಳಿದರು. ರೈತ ಹತ್ತು ಸಾವಿರ ರೂಪಾಯಿಗಳ ಆದಾಯ ಬರುವುದಿಲ್ಲ ಎಂದು ಹೇಳಿದರೆ ಸರ್ಕಾರ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ವಹಿಸಿಕೊಳ್ಳುವಂತಿರಬೇಕು.

ಶ್ರೀ ಟಿ. ಮರಿಯಪ್ಪ.—ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಮಸೂದೆ ಬರುತ್ತದೆ; ಆಗ ಮಾತನಾಡಿ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನು ಕಂದಾಯದಮೇಲೆ ಹಾಕುತ್ತಾರೆ. ಹೀಗೆ ಮಾಡುವುದರಿಂದ ಸಾಮಾನ್ಯ ಮನುಷ್ಯನಮೇಲೆ ತೆರಿಗೆ ಬೀಳುತ್ತದೆಯೇ ವಿನಾ ಶ್ರೀಮಂತರಮೇಲೆ ಬೀಳುವುದಿಲ್ಲ. ತೆಂಗಿನಗಿಡಗಳ ಮೇಲೆ ಎಷ್ಟು ಟ್ಯಾಕ್ಸ್ ಬೀಳುತ್ತದೆ ಎಂದು ತಾವು ಆಲೋಚನೆ ಮಾಡಬೇಕು. ಒಬ್ಬ ಸಾಮಾನ್ಯ ಮನುಷ್ಯ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಇಷ್ಟೆಲ್ಲಾ ಕೊಟ್ಟು ತನ್ನ ಪ್ರತಿಯೊಂದು ವ್ಯವಹಾರವನ್ನೆಲ್ಲಾ ಯಾವ ರೀತಿ ಪೂರೈಸಬೇಕು ಎನ್ನುವುದನ್ನು ತಾವು ಸ್ವಲ್ಪ ಆಲೋಚನೆಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಬೆಳೆ ಬೆಳೆಯುವವರಮೇಲೆ ಬೀಳುವುದಿಲ್ಲ. ಯಾರು ಕೊಂಡುಕೊಳ್ಳುತ್ತಾರೋ ಅವರು ಮಾತ್ರ ಸೇಲ್ಸ್‌ಟ್ಯಾಕ್ಸ್‌ನ್ನು ಶೇಕಡ ಒಂದು ಭಾಗದಷ್ಟು ಕೊಡುತ್ತಾರೆ. ರೈತರ ಮೇಲೆ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಸಾಧಾರಣವಾಗಿ ಹೊರಗಡೆ ಹೋಗಿ ಕಡಮೆ ಬೆಲೆಗೆ ಸಿಕ್ಕಿದರೆ ಆಗ ಹೊಸದಾಗಿ ಹಾಕಿದ ತೆರಿಗೆಯನ್ನು ಎಗ್ಸೆಮ್ಟ್ ಮಾಡಬೇಕು. ಸೇವಾದಳ, ತಾಲ್ಲೂಕು ಅಭಿವೃದ್ಧಿ ಕಮಿಟಿಗಳು, ಸೊಸೈಟಿಗಳು ಎಂದು ಹೇಳಿ ಕೆಲಸಕ್ಕೆ ಬಾರದೆ ಇರುವ 28 ಬಾಬುಗಳಿಗೆ ಬೇಕಾದಷ್ಟು ತಮ್ಮ ಪಾರ್ಟಿ ಬೆಳೆಸುವ ದೃಷ್ಟಿಯಿಂದ ಮಾಡುತ್ತಿದ್ದಾರೆ. ಇದರಿಂದ ನಿಜವಾಗಿ ದೇಶಕ್ಕೆ ಒಳ್ಳೆಯದಾಗುತ್ತದೆಯೇ ಎನ್ನುವುದನ್ನು ಯೋಚನೆಮಾಡಬೇಕು. ಈಗ ಇಂಟೆರಿಮ್ ಬಡ್ಜೆಟ್ ನೋಡಿ ಸೇವಾದಳ, ಸೋಷಿಯಲ್ ವೆಲ್‌ಫೇರ್ ಮುಂತಾದ ಐಟಮ್‌ಗಳಿಗೆಲ್ಲಾ ತಾವು ಹಣ ಕೊಟ್ಟಿದ್ದೀರಿ. ಅದನ್ನೆಲ್ಲಾ ಖೋತಾ ಮಾಡಬೇಕು. ಈ ಚರ್ಚೆಗೆ ಇನ್ನು ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ದಯವಿಟ್ಟು ಶ್ರೀಮಂತರಿಗೆ ಹೆಚ್ಚು ಟ್ಯಾಕ್ಸ್ ಹಾಕಿ. ಬಡವರು ಉಪಯೋಗಿಸುವ ನಿತ್ಯ ವಸ್ತುಗಳ ಮೇಲೆ ತೆರಿಗೆಯನ್ನು ವಜಾಮಾಡುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ ನಾನು ಮೊದಲೇ ಪ್ರಾರ್ಥನೆ ಮಾಡಿಕೊಂಡ ಹಾಗೆ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಬೇಕೆಂದು ಕ್ಲೋಶರ್ ಮೋಷನ್ ಮೂವ್ ಮಾಡುತ್ತೇನೆ.

Mr. SPEAKER.—Closure motion has been moved and I am inclined to accept it. The question is :—

"that the question be now put."

The motion was adopted.

ಶ್ರೀ ಟಿ. ಮರಿಯಪ್ಪ.—ಅಧ್ಯಕ್ಷರೇ, ಮಾರಾಟ ತೆರಿಗೆಯವಿಷಯದಲ್ಲಿ ಆರಿಸಿದ ಸಮಿತಿಯ ವರದಿಯ ಮೇಲೆ ಚರ್ಚೆ ಆಗದಿದ್ದರೆ ಬಹಳ ಸಂತೋಷವಾಗುತ್ತಿತ್ತು. ಕೆಲವು ಮಹನೀಯರು ಮೂಲತತ್ತ್ವವನ್ನು ವಿಮರ್ಶೆಮಾಡಲು ಹೊರಟಿದ್ದಾರೆ. ಹೀಗಾಗಿ ಇನ್ನಾದರೂ ಪಾರ್ಲಿಮೆಂಟರಿ ಡೆಮಾಕ್ರಸಿಯ ಒಂದು ತತ್ತ್ವವನ್ನು ನಾವು ಅನುಸರಿಸಿಕೊಂಡು ಹೋಗುವುದು ಅಗತ್ಯವೆಂದು ಎಲ್ಲರಿಗೂ ಬಹಳ ವಿನಯದಿಂದ ಮನವಿಮಾಡಿ ಕೊಳ್ಳುತ್ತೇನೆ. ಯಾವುದೇ ಮಸೂದೆಯಾಗಿರಲಿ ಫಸ್ಟ್ ಸ್ಟೇಜಿನಲ್ಲಿ ಹೋಗುವ ಮೊದಲು ಮೂಲ ತತ್ತ್ವಗಳ ಮೇಲೆ ಚರ್ಚೆ ಮಾಡಬೇಕು. ಸೆಲೆಕ್ಟ್ ಕಮಿಟಿಗೆ ಹೋಗಿಬಂದ ಮೇಲೆ ಯಾವ ರೀತಿ ಅದರ ಮೇಲೆ ಚರ್ಚೆಯಾಗಬೇಕೆಂಬ ವಿಚಾರದಲ್ಲಿ ಒಂದು ಪ್ರೊಸೀಜರನ್ನು ಪ್ರಾರಂಭ ಮಾಡುವುದು ಉತ್ತಮ. ಹಾಗೆ ಮಾಡಿದ್ದರೆ ಈ ವರದಿಯಮೇಲೆ ಇಷ್ಟು ವಿಪುಲವಾದ ಚರ್ಚೆ ಆಗಬೇಕಾಗಿದ್ದಿಲ್ಲ.

Sri U. M. MADAPPA.—That is for the Chair to look after.

ಶ್ರೀ ಟಿ. ಮರಿಯಪ್ಪ.—ಈ ಮಸೂದೆಯ ವಿಷಯದಲ್ಲಿ ಸೆಲೆಕ್ಟ್ ಸಮಿತಿಯವರು, ನಾನು ಈ ಸಭೆಯಲ್ಲಿ ಅರಿಕೆಮಾಡಿಕೊಂಡಿರುವ ಹಾಗೆ ದೀರ್ಘವಾಗಿ ಮತ್ತು ಆಳವಾಗಿ ಆಲೋಚನೆಮಾಡಿ ಹೊಸದಾಗಿ ತಂದಂಥ ಈ ತೆರಿಗೆಯ ಮೇಲೆ ಏನೇನು ಆರ್ಗ್ಯುಮೆಂಟ್ ಮಾಡಬೇಕಾಗಿತ್ತೋ ಅದನ್ನೆಲ್ಲಾ ಮಾಡಿದ್ದಾರೆ. ಆದರೆ ಇದು ಹೊಸದಾದ ತೆರಿಗೆಯಲ್ಲ. ಮೈಸೂರಿನಲ್ಲಿ ಒಂದು ವಿಧದಲ್ಲಿ ಜಾರಿಯಲ್ಲಿದೆ. ಮದ್ರಾಸಿನಲ್ಲಿ ಒಂದು ವಿಧದಲ್ಲಿ ಜಾರಿಯಲ್ಲಿದೆ, ಹೈದ್ರಾಬಾದಿನಲ್ಲಿ ಒಂದು ತರಹ ಜಾರಿಯಲ್ಲಿದೆ, ಬೊಂಬಾಯಿಯಲ್ಲಿ ಒಂದು ರೀತಿಯಲ್ಲಿ ಜಾರಿಯಲ್ಲಿದೆ. ಮದ್ರಾಸ್ ಸೇಲ್ಸ್ ಟ್ಯಾಕ್ಸ್ ಆಕ್ಟ್ ಕೊಳ್ಳೆಗಾಲದಲ್ಲಿ ಜಾರಿಯಲ್ಲಿದೆ, ಶ್ರೀಮಾನ್ ವೆಂಕಟೇಗೌಡರು ಹೇಳಿದ ಹಾಗೆ ಹೈದರಾಬಾದಿನಿಂದ ಬಂದಿರುವ ಪ್ರದೇಶಗಳಿಗೆ ಸ್ವಲ್ಪ ರಿಯಾಯ್ತಿ ಆಗಿಯೇ ಆಗುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ. ತೆರಿಗೆಯನ್ನು ಸಮನ್ವಯಮಾಡುವಾಗ ಕೆಲವರಿಗೆ ತೆರಿಗೆ ಕಡಮೆಯಾಗುತ್ತದೆ; ಕೆಲವರಿಗೆ ಜಾಸ್ತಿಯಾಗುತ್ತದೆ, ಕೆಲವರಿಗೆ ಇದ್ದಷ್ಟೇ ಇರುತ್ತದೆ. ಈ ದೃಷ್ಟಿಯಿಂದ ಯಾರೂ ಯೋಚನೆ ಮಾಡಬೇಕಾಗಿಲ್ಲ. ಹೊಸದಾಗಿ ರಾಜ್ಯಸ್ಥಾಪನೆಯಾದಮೇಲೆ ಯಾರುಯಾರಿಗೆ ಏನೇನು ಮಾಡಬೇಕು ಎಂಬುದನ್ನು ಯೋಚಿಸಬೇಕು. ಜನತೆಗೆಲ್ಲಾ ಹೊಸದಾಗಿ ಒಂದೇ ತೆರಿಗೆ ಇರಬೇಕು. ಗೌರ್ನರ್ ಅವರ ಭಾಷಣದ ಮೇಲೆ ಮತ್ತು ಬಡ್ಜೆಟ್ಟಿನ ಮೇಲಿನ ಚರ್ಚೆಯ ಕಾಲದಲ್ಲಿ ಎಲ್ಲರೂ ಹೊಸ ತೆರಿಗೆ ಜಾಸ್ತಿಯಾಗಿದೆ ಎಂದು ಹೇಳಿದರು. ಡಾ|| ನಾಗನಗೌಡರೂ ಸಹ ಹೀಗೆ ಹೇಳಿದರು. ಎಲ್ಲರೂ ಹೀಗೆ ಹೇಳಿದರೆ ಉತ್ತರ ಕೊಡುವುದು ಹೇಗೆ ? ಸರ್ಕಾರ ನಡೆಯುವುದು ಹೇಗೆ ? ಈಗ ಇರುವ ಸೇಲ್ಸ್ ಟ್ಯಾಕ್ಸನ್ನು ತೆಗೆದುಹಾಕಿ ಎಂದು ಹೇಳಿದರೆ ಅದು ಒಂದು ತರಹ. There must be some method in our statement. ಹಿಂದೆ ಮದರಾಸಿಗೆ ಸೇರಿದ ಸೌತ್ ಕೆನರಾದಿಂದ ಕೆಲವು ಮಾನ್ಯ ಸದಸ್ಯರು ಇಲ್ಲಿಗೆ ಬಂದಿದ್ದಾರೆ. ಅವರನ್ನು ಕೇಳಿ, ಮದರಾಸಿನಲ್ಲಿ ಬಿದ್ದಿರುವ ತೆರಿಗೆ ಬಹಳ ಜಾಸ್ತಿ, ಅದು ಮಲ್ಟಿಪಾಯಿಂಟ್ 2 ಪರ್ಸೆಂಟ್, ಇದರಿಂದ ತೆರಿಗೆ ಕೊಡುವವರಿಗೆ ತೊಂದರೆ ಇದೆ, ವಸೂಲು ಮಾಡುವವರಿಗೆ ತೊಂದರೆಯಿದೆ, ಲೆಕ್ಕ ಕೊಡುವುದಕ್ಕೆ ಬಹಳ ತೊಂದರೆಯಾಗಿದೆ, ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದರೆ ತೆರಿಗೆಯನ್ನು ಸಲೀಸಾಗಿ ವಸೂಲುಮಾಡಬಹುದು. ಆದ್ದರಿಂದ ಸಿಂಗಲ್ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಹಾಕಬೇಕೆಂದು ಎಲ್ಲಾ ಕಡೆಗಳಿಂದಲೂ ಮನವಿ ಬಂದಿದೆ. ಬೊಂಬಾಯಿಯಲ್ಲಿ ಡಬ್ಬಲ್ ಪಾಯಿಂಟ್ ಟ್ಯಾಕ್ಸ್ ಮಾಡಿದ್ದಾರೆ ಎಂದು ಬೊಂಬಾಯಿ ಪ್ರಾಂತದ ಅನೇಕರು ತಿಳಿಸಿದ್ದಾರೆ. ಹೈದ್ರಾಬಾದು ಮತ್ತು ಮದರಾಸು ಏರಿಯಾದಲ್ಲಿ ಎಗ್ಸೆಮ್ಷನ್ ಲಿಸ್ಟಿನಲ್ಲಿ ಮೂರು ನಾಲ್ಕು ಐಟಮ್‌ಗಳಿವೆ. ಉಪ್ಪು ಮತ್ತು ವಿದ್ಯುಚ್ಛಕ್ತಿ ಎರಡನ್ನು ಬಿಟ್ಟು ಬಾಕಿ ಎಲ್ಲಾ ಪದಾರ್ಥಗಳ ಮೇಲೆ ಹಾಕಿದ್ದಾರೆ. ನಮಗೆ ಹಣ ಬರುತ್ತದೆಂದರೂ ತಮ್ಮ ಆಶೋತ್ತರಗಳಿಗೆ ಅನುಗುಣವಾಗಿ ಆಹಾರ ಪದಾರ್ಥಗಳ ಮೇಲೆ ತೆರಿಗೆಯನ್ನು

ಹಾಕಲಿಲ್ಲ. ಹಳೆಯ ಹೈದರಾಬಾದಿನ ಪ್ರದೇಶ ಒಂದರಿಂದಲೇ ಆಹಾರ ಪದಾರ್ಥಗಳ ಮಾರಾಟ ತೆರಿಗೆಯಿಂದ 28 ಲಕ್ಷ ರೂಪಾಯಿಗಳು ಹೋಗುತ್ತವೆ.

ಆದ್ದರಿಂದ ತಾವು ಈಗ ಬರುತ್ತಾ ಇರತಕ್ಕ ವರಮಾನ, ಈಗ ಜಾರಿಯಲ್ಲಿರತಕ್ಕ ತೆರಿಗೆಗಳ ರೀತಿ ಮತ್ತು ಸ್ಟ್ರಕ್ಚರ್ ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಹೊಸದಾಗಿ ಸಮನ್ವಯಮಾಡಿರತಕ್ಕ ಟ್ಯಾಕ್ಸ್‌ನಲ್ಲಿ ಲೋಪದೋಷ ಏನು, ಯಾವಯಾವ ಪಾಯಿಂಟ್‌ನಲ್ಲಿ ಜಾಸ್ತಿಯಾಗುತ್ತದೆ, ಯಾವ ಪಾಯಿಂಟ್‌ನಲ್ಲಿ ಇಕ್‌ಸಿಡೆಕ್ಸ್ ಬಡವನ ಮೇಲೆ ಜಾಸ್ತಿ ಬೀಳುತ್ತದೆ ಎಂದು ತಾವು ತಮ್ಮ ಟೀಕೆಗಳಲ್ಲಿ ಹೇಳಿದ್ದರೆ ನಮಗೆ ಇನ್ನೊಂದುಸಾರಿ ತಿದ್ದುಪಡಿ ತರುವುದಕ್ಕೆ ಬಹಳ ಸಹಾಯಕವಾಗುತ್ತಿತ್ತು. ಸೆಲೆಕ್ಟ್ ಕಮಿಟಿಯವರು ಈ ಮಸೂದೆಯಲ್ಲಿರುವ ಪ್ರತಿಯೊಂದು ವಿಷಯವನ್ನೂ ಪರಿಶೀಲನೆಮಾಡಿದ್ದಾರೆ. ಜೊತೆಗೆ ನಮ್ಮ ಈ ಹೊಸ ರಾಜ್ಯದಲ್ಲಿ ಇವರ ವ್ಯಾಪಾರ ಪಕ್ಕದವರಿಗೆ ಹೋಗಬಾರದು, ಪಕ್ಕದ ಸಂಸ್ಥಾನದಿಂದ ಸಾಮಾನುಗಳು ಸ್ಮಗ್ಲ್ ಆಗಿ ನಮಗೆ ಬರಬಾರದು, ಅದನ್ನು ಕಾಪಾಡಬೇಕು, ಒಂದೇ ಒಂದು ಪರ್ಸೆಂಟು ಕಡಮೆಯಾದರೂ ಪಕ್ಕದವರು ಸ್ಮಗ್ಲ್‌ಮಾಡಿ ಇಲ್ಲಿಗೆ ತಂದು ಮಾರುತ್ತಾರೆ ಎಂದು ಹೇಳಿ ಇಲ್ಲಿನ ತೆರಿಗೆ ಅಲ್ಲಿನ ತೆರಿಗೆ ಹೆಚ್ಚು ಕಡಮೆ ಸಮನಾಗಿರಬೇಕು ಎಂದು ಈ ಎಲ್ಲಾ ಅಂಶಗಳನ್ನೂ ಇಟ್ಟುಕೊಂಡು ತೆರಿಗೆಯ ದರ ಮತ್ತು ತೆರಿಗೆ ಒಂದು ಪಾಯಿಂಟ್ ಮೇಲೆ ಹಾಕಬೇಕು, ಪರ್ಚೇಸ್ ಪಾಯಿಂಟೇ ಸೇಲ್ಸ್ ಪಾಯಿಂಟೇ ಎನ್ನುವುದನ್ನು ಸೂಚನೆ ಮಾಡಿದ್ದಾರೆ. ಕಚ್ಚಾಮಾಲು ಆಗಿರತಕ್ಕ ವಸ್ತುಗಳು ಅವು ಕಾರ್ಖಾನೆಗಳಿಗೆ ಉಪಯೋಗವಾಗುವುದರಿಂದ ಕೇಂದ್ರ ಸರ್ಕಾರದವರು ಡಿಕ್ಲೇರ್ಡ್ ಗುಡ್ಸ್ ಎಂದು ಲಿಸ್ಟ್‌ಮಾಡಿ ಎರಡು ಪರ್ಸೆಂಟ್‌ಗಿಂತ ಜಾಸ್ತಿ ಹಾಕಬಾರದು ಎಂದು ವಿಧಾಯಕಮಾಡಿರುವುದರಿಂದ ಅದಕ್ಕೆ ಮಾತ್ರ ಎರಡು ಪರ್ಸೆಂಟಿಗೆ ಮೀರಿಲ್ಲ. ಅದರಲ್ಲಿ ಹತ್ತಿ ಕಚ್ಚಾಮಾಲು ; ಆದ್ದರಿಂದ ಒಂದು ಪರ್ಸೆಂಟ್ ಹಾಕಿದ್ದೇವೆ. ಬೊಂಬಾಯಿಯಲ್ಲಿ ಒಂದು ಪರ್ಸೆಂಟ್ ಇದೆ, ನಾವು ಎರಡು ಪರ್ಸೆಂಟ್ ಹಾಕಿದರೆ ಡೈವರ್ಟ್ ಆಗುತ್ತದೆ. ಹೀಗೆಯೇ ಕಾಫೀ ಬೀಜದಮೇಲೂ ಮದರಾಸಿನಲ್ಲಿ ಐದು ಪರ್ಸೆಂಟ್ ಇದೆ. ಆ ಐದು ಪರ್ಸೆಂಟ್ ನಾವು ಇಲ್ಲಿ ಹಾಕದಿದ್ದರೆ ಅದರ ಪ್ರತಿಫಲ ಏನಾಗುತ್ತದೆ ಎಂಬುದನ್ನು ತಾವು ದಯವಿಟ್ಟು ನೋಡಿ. ಮೈಸೂರು, ಮದರಾಸು ಇಲ್ಲೇ ಕಾಫೀ ಬೆಳೆಯುವುದು ಹೆಚ್ಚು. ಕಾಫಿ ಬೋರ್ಡಿನವರೂ ಕೂಡ ಹೇಳಿದ್ದಾರೆ. ಅಲ್ಲಿ ಏನಿದೆ ಅದನ್ನೇ ಇಲ್ಲೂ ಹಾಕೋಣ. ಅದಕ್ಕೆ ಯಾರೂ ಆಕ್ಷೇಪಣೆ ಮಾಡುವುದಿಲ್ಲ. ಅದು ಧರ್ಮ. ಹೀಗೆ ಇದನ್ನೆಲ್ಲಾ ಆಲೋಚನೆಮಾಡಿ ಪ್ರತಿಯೊಂದು ಭಾಗಕ್ಕೂ ಕಮಿಟಿಯವರು ದರ ಮತ್ತು ಯಾವ ಷೆಡ್ಯೂಲ್‌ನಲ್ಲಿ ಇರಬೇಕೆಂಬುದನ್ನು ನಿಷ್ಕರ್ಷೆಮಾಡಿ, ಕಷ್ಟಪಟ್ಟು ತಮ್ಮ ಮುಂದೆ ಈ ವರದಿಯನ್ನು ಇಟ್ಟರೆ ತಾವು ಬುಡಕ್ಕೇ ಹೊರಟುಹೋಗಿದ್ದೀರಿ. ಇದರಲ್ಲಿ ನಮ್ಮ ಮಾನ್ಯ ಸ್ನೇಹಿತರಾದ ಕೆಂಚಪ್ಪನವರು ತಮ್ಮ ಡಿಸೆಂಟಿಂಗ್ ನೋಟ್‌ನಲ್ಲಿ ಪ್ರಶ್ನೆಯನ್ನೇ ಮಾಡಿದ್ದಾರೆ. Common man ಎಂದು ಹಿಡಿದುಕೊಂಡಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಈ ಅಪ್ರತ್ಯಕ್ಷ ತೆರಿಗೆ ಹೊಸದಲ್ಲ, ಎಲ್ಲಾ ದೇಶದಲ್ಲೂ ಇದೆ. ಮೊನ್ನೆ ಪ್ರೊಫೆಸರ್ ಮಹಾಲನೋಬಿಸ್‌ರವರು ಬಂದಿದ್ದಾಗ ಏನು ಹೇಳಿದರು ? ಅವರು ಕಮ್ಯೂನಿಸ್ಟ್ ರಾಜ್ಯ ನೋಡಿದ್ದಾರೆ ; ಕ್ಯಾಪಿಟಲಿಸ್ಟ್ ರಾಜ್ಯ ನೋಡಿದ್ದಾರೆ. ಅವರೂ ಕೂಡ ಅಪ್ರತ್ಯಕ್ಷ ತೆರಿಗೆ ಹಾಕುವುದು ಬಹಳ ಯುಕ್ತ ಎಂದು ಹೇಳಿದ್ದಾರೆ. ಲಕ್ಷುರಿ ಗುಡ್ಸ್‌ಗೆ 1 : 8 ; 1 : 30 ಹೀಗೆ ಇರಬೇಕೆಂದು ಅವರು ಹೇಳುತ್ತಾರೆ.

Sri V. P. DEENADAYALU NAIDU.—With regard to the levy of sales tax, they do not object . . . .

Sri T. MARIAPPA.—I do not yield, Sir, unless it is a point of order. ಶ್ರೀಮಾನ್ ಕೆಂಚಪ್ಪನವರು, ಪುಟ್ಟರಾಮಯ್ಯನವರು, ಮತ್ತು ರಾಜಯ್ಯ ಶೆಟ್ಟರು ಬರೆದಿರತಕ್ಕ ಡಿಸೆಂಟಿಂಗ್ ನೋಟ್ ನನಗಂತೂ ಅರ್ಥವಾಗುವುದಿಲ್ಲ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿಬಿಟ್ಟರು. ಕೆಂಚಪ್ಪನವರಿಗೆ ಉತ್ತರ ಕೊಡಬೇಕೆಂದು ಆಶೆ ಬಂದರೂ ನಾವಿಬ್ಬರೂ ಒಂದೇ ಕಡೆ ಓದಿದ್ದೇವೆ ಅದು ಬಾಧಿಸುತ್ತಾ ಇದೆ. ಏಕೆಂದರೆ ಏನೇನೋ ಹೇಳಿಬಿಟ್ಟಿದ್ದಾರೆ; ಇದೆಲ್ಲಾ ಎಷ್ಟು ದಿವಸ, ನೀವೇ ಅನುಭವಿಸಬೇಕಾಗುತ್ತದೆ ಎಂದು, ಇದಕ್ಕೂ ಸೇಲ್ಸ್ ಟ್ಯಾಕ್ಸ್‌ಗೂ ಅಜಗಜಾಂತರ ವ್ಯತ್ಯಾಸ ಎಂದು ಇಷ್ಟು ಮಾತ್ರ ಮೃದುವಾಗಿ ಹೇಳುತ್ತೇನೆ. ಇನ್ನೂ ಒಂದು ವಿಷಯ ಹೇಳಿದ್ದಾರೆ, ನಾವು ಬೇರೆ ತರಹ ಮಾಡುತ್ತೇವೆ ಎಂದು. ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರೂ ಒಳ್ಳೆಯ ಕುಸ್ತಿಗಾರರು. ಪೂನಾದಲ್ಲಿ ನಾವು ಓದುತ್ತಿದ್ದಾಗ ಪ್ರಶಸ್ತಿ ತೆಗೆದುಕೊಂಡಿದ್ದಾರೆ. ಈ ರೀತಿ ಹೇಳುವುದರಲ್ಲಿ ಅವರು ಏನು ಭಾವನೆ ಇಟ್ಟಿದ್ದಾರೋ ನನಗೆ ಗೊತ್ತಾಗುವುದಿಲ್ಲ. ಏನೋ ಹೆದರಿಸಿದ ಹಾಗೆ ಇದೆಯಲ್ಲಾ ! ಅಂತೂ ನಿಮಗೂ ನಮಗೂ ಅಭಿಪ್ರಾಯ ಭೇದವಿರುವುದಕ್ಕೆ ಕಾರಣವೇ ಇಲ್ಲ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಕೇರಳದಲ್ಲಿ ಪಿ.ಎಸ್.ಪಿ. ಯವರು ಅಪೋಸಿಷನ್‌ನಲ್ಲಿ ಇದ್ದಾರೆ. ಎಷ್ಟೋ ದಿವಸ ರಾಜ್ಯಭಾರ ಮಾಡಿದರು, ಸೇಲ್ಸ್ ಟ್ಯಾಕ್ಸನ್ನೂ ಕಿತ್ತುಹಾಕಿದರೇ ? ಅಥವಾ ತಾವು ಹೇಳಿದ ಪದಾರ್ಥಗಳನ್ನು ಎಗ್ಜೆಮ್ಟ್ ಮಾಡಿದ್ದಾರೆಯೇ ಎಂಬುದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು. ಆಮೇಲೆ ಇನ್ನೊಂದು ವಿಷಯ ಹೇಳಿದ್ದಾರೆ. Each man unto himself and let the devil take care of the hindmost ಎಂದು. It applies to your group more appropriately because we are prepared to take care of the hindmost. ಹೀಗೆಲ್ಲಾ ಕನ್‌ಸಿಸ್ಟೆಂಟಾಗಿ ಪಿ.ಎಸ್.ಪಿ. ಅವರು ಯಾವ ಯಾವ ಪ್ರಾಂತದಲ್ಲಿ ಏನು ಪ್ರತಿಪಾದನೆ ಮಾಡಿದ್ದಾರೆ ಎಂಬುದನ್ನು ನೋಡಬೇಕು. Sir, we are in a democray where at least the two-party system should work.

Sri K. KENCHAPPA.—In what province is the P.S.P. Government functioning now, Sir ?

Sri T. MARIAPPA.—In Travancore-Cochin it functioned for some time. ಇನ್ನೊಂದು ವಿಷಯವನ್ನು ಹೇಳುತ್ತೇನೆ.

> "This Mysore Sales Tax Bill seeks to levy taxation which falls on consumer, and thereby it introduces further burden on the common man, who is already taxed far beyond his taxable capacity..."

(SRI T. MARIAPPA)

ನಾನು ಮೊದಲೇ ಈ ಬಿಲ್ಲನ್ನು ಸಭೆಯ ಮುಂದೆ ಇಡುವಾಗ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ; ಫೈನಾನ್ಸ್ ಎನ್‌ಕ್ವೈರಿ ಕಮಿಟಿ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಹೇಳಿದ್ದೇನೆ. Taxable capacity ಇದೆ ಎಂದು ತಜ್ಞರು ಅಂಕಿ ಅಂಶಗಳ ಆಧಾರದ ಮೇಲೆ ಹೇಳಿದ್ದಾರೆ. ನ್ಯಾಷನಲ್ ಇನ್‌ಕಂ ಏನು; ಅದರಲ್ಲಿ ಎಷ್ಟು ಪರ್ಸೆಂಟ್ ಟ್ಯಾಕ್ಸ್ ಇದೆ ಎಂಬುದನ್ನೆಲ್ಲಾ ಹೇಳಿದ್ದಾರೆ. ತಜ್ಞರ ವರದಿಯನ್ನು ಬಿಸಾಡುತ್ತೇವೆ ಎಂದರೆ ಏನು ಪ್ರಯೋಜನವಾಗುತ್ತದೆ! ನಾವು ನಮ್ಮ ಮೂಗಿನ ನೇರಕ್ಕೆ ಹೇಳಿದಂತಾಗುತ್ತದೆಯೇ ಹೊರತು ಶಾಸ್ತ್ರದ ಆಧಾರ ಏನಿದೆ ಅದನ್ನು ಕೋಟ್ ಮಾಡಬೇಕಾಗಿತ್ತು. ಟ್ಯಾಕ್ಸೇಷನ್ ಎನ್‌ಕ್ವೈರಿ ರಿಪೋರ್ಟ್, ಫೈನಾನ್ಸ್ ಎನ್‌ಕ್ವೈರಿ ಕಮಿಟಿ ರಿಪೋರ್ಟ್ ಇದನ್ನೆಲ್ಲಾ ಆರ್ಥಿಕ ತಜ್ಞರು ಮಾಡಿದ್ದಾರೆ. ಅದನ್ನು ನಮೂದುಮಾಡಿ ಹೇಳಿದ್ದರೆ ಒಪ್ಪಿಕೊಳ್ಳುತ್ತಾ ಇದ್ದೆ. ಟ್ಯಾಕ್ಸೇಷನ್ ಎನ್‌ಕ್ವೈರಿ ರಿಪೋರ್ಟಿನಲ್ಲಿ 5,000 ಮಿನಿಮಂಗೆ ಇಳಿಸಬೇಕು. ಲೋಯರ್ ಸ್ಟ್ರಾಟಾನಲ್ಲಿ ಸ್ವಲ್ಪ ಕಡಮೆಯಾಗಿ ತೆರಿಗೆ ಹಾಕಬೇಕು ಎಂದು ಹೇಳಿದ್ದಾರೆಯೇ ಹೊರತು ಅಪ್ರತ್ಯಕ್ಷ ತೆರಿಗೆ ಹಾಕಕೂಡದು ಎಂದು ಯಾರೂ ಹೇಳಿಲ್ಲ.

ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿ ರಿಪೋರ್ಟ್‌ನಲ್ಲಿ ಇದು ಬಹಳ ಕಾಲದಿಂದ ಇತ್ತು ಎಂಬುದನ್ನು ಪೀಠಿಕೆಯಲ್ಲೇ ಹೇಳಿದ್ದಾರೆ:—

> "We kno v it on the authority of those who have delved into these matters that the sales-tax was not unfamiliar to the people in ancient India."

Sir, I am only quoting from the taxation Enquiry Committee Report and I think it is enough proof that Committee had bestowed sufficient thought over this question.

5-30 P.M.

ಆಮೇಲೆ ಕೆಲವು ವಿಷಯಗಳನ್ನು ನಾನು ಸಂಕ್ಷೇಪವಾಗಿ ಹೇಳುತ್ತೇನೆ. ಷೆಡ್ಯೂಲಿನ ವಿಚಾರದಲ್ಲಿ ಕೂಡ ನಮ್ಮ ಮಾನ್ಯ ಮಿತ್ರರಾದಂಥ ಕೆಂಚಪ್ಪನವರು, ಪುಟ್ಟರಾಮಯ್ಯನವರು, ರಾಜಯ್ಯಶೆಟ್ಟರು, 31 articles exempt ಮಾಡಬೇಕೆಂದು ಹೇಳಿರುವುದು ಸಕಾರಣವಾಗಿಲ್ಲ. ಕೆಲವರು ಸೆಲೆಕ್ಟ್ ಕಮಿಟಿಯ ಸದಸ್ಯರಾಗಿದ್ದರು. ಅಲ್ಲಿ ಏನು ನಡೆಯಿತು ಎನ್ನುವುದನ್ನು ಪ್ರಸ್ತಾಪ ಮಾಡಿದರೆ ರಾಜ್ಯಾಂಗದ ಪ್ರಕಾರ ವಿರುದ್ಧ. ಆದರೆ ಸಕಾರಣವಾಗಿ ಈ ಪದಾರ್ಥಗಳೆಲ್ಲವನ್ನೂ ತೀರ ಬಡವರೇ ಉಪಯೋಗಿಸುತ್ತಾರೆಂದು ಹೇಳುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಶ್ರೀಮಾನ್ ಜಂಬಣ್ಣನವರು ಹೇಳಿದಂಥ ಕೆಲವು ವಿಷಯಗಳು ಯೋಚನೆಮಾಡಬೇಕಾದಂಥವು. ಬಡವರು ಬಟ್ಟೆ, ದುಪ್ಪಟಿ ಹೊದ್ದುಕೊಳ್ಳುತ್ತಾರೆಂದು ಹೇಳಿದರು. ಅದಕ್ಕೋಸ್ಕರವೇ ಕೈಮಗ್ಗದ ಬಟ್ಟೆಗಳಿಗೆ ವಿನಾಯಿತಿ ಮಾಡಿದ್ದೇವೆ. ಹತ್ತಿಬೀಜದ ವಿಚಾರ ಹೇಳಿದರು. ಅದಕ್ಕೆ ಶೇಕಡ ಒಂದರಂತೆ ತೆರಿಗೆ ಹಾಕಿದ್ದೇವೆ. ಸೆಲೆಕ್ಟ್ ಕಮಿಟಿಯವರು ಈ ವಿಚಾರ ಬಹಳವಾಗಿ ಆಲೋಚನೆಮಾಡಿದರು. ಹತ್ತಿಬೀಜವನ್ನು ಫ್ಯಾಕ್ಟರಿಯಲ್ಲಿ ಕೊಂಡುಕೊಂಡು, ಅದರಿಂದ ಎಣ್ಣೆ ತೆಗೆದು, ಎಣ್ಣೆಯನ್ನು industrial purposesಗೆ ಉಪಯೋಗಿಸುತ್ತಾರೆ ಮತ್ತು ರಫ್ತು ಮಾಡುತ್ತಾರೆ. ಇದಕ್ಕೆ ಹೋಲಿಸಿದರೆ ಜನಗಳು ತಿನ್ನತಕ್ಕ ಪ್ರಮಾಣ (proportion) ಬಹಳ ಕಡಮೆ. ಅದಕ್ಕೋಸ್ಕರವೇ ಇದರ ಮೇಲೆ ಬಹಳ ಕಡಮೆ ತೆರಿಗೆಯನ್ನು ಹಾಕಬೇಕೆಂದು ಬೊಂಬಾಯಿಯ ಕಡೆಯಿಂದ ಬಂದಿರುವ ಸದಸ್ಯರನ್ನು ಒಪ್ಪಿಸಿಕೊಂಡು ಈ ತೆರಿಗೆಯನ್ನು ಹಾಕಿದ್ದೇವೆ. ಒಂದೇ ಪಾಯಿಂಟ್ ತೆರಿಗೆ ಹಾಕಿರುವುದರಿಂದ ಅಷ್ಟೊಂದು ತೊಂದರೆಯಾಗುವುದಿಲ್ಲವೆಂದು ಹೇಳಿದರು. ಅದೇ ರೀತಿ ಎಲ್ಲೆಲ್ಲಿ heavy burden ಬೀಳಬಹುದು ಎಂದು ಕಮಿಟಿಯವರ ಗಮನಕ್ಕೆ ಬಂದ ಕಡೆಯಲ್ಲಿ light tax single point ಹಾಕಿದ್ದೇನೆ. ಸೆಲೆಕ್ಟ್ ಕಮಿಟಿಯವರು ಸುಧಾರಣೆಗಳನ್ನು ಮಾಡಿಲ್ಲ. ಕಾಳು ಹೋಗಿ ಭತ್ತ ಬಂತು ಎಂದು ನಮ್ಮ ಸ್ನೇಹಿತರು ಹೇಳಿದರು. ಹಾಗೇನೂ ಮಾಡಿಲ್ಲ. ಸೆಲೆಕ್ಟ್ ಕಮಿಟಿಯವರು additional levy ಹಾಕಿರತಕ್ಕ ಮೊದಲನೆಯ ಷೆಡ್ಯೂಲಿನಲ್ಲಿ 18 ಸಾಮಾನುಗಳನ್ನು ಮಾತ್ರ ಇಟ್ಟುಕೊಂಡು ಉಳಿದವುಗಳನ್ನೆಲ್ಲ ಸಿಂಗಲ್ ಪಾಯಿಂಟಿಗೆ ಟ್ರಾನ್ಸ್‌ಫರ್ ಮಾಡಿದ್ದೇವೆ. ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕುವ ಷೆಡ್ಯೂಲಿನಲ್ಲಿ ಅನೇಕ ಪದಾರ್ಥಗಳನ್ನು ಹಾಕಿದ್ದೇವೆ. ಮದರಾಸು ಅಸೆಂಬ್ಲಿಯಲ್ಲಿ ಇದೇ ತರಹ ಬಿಲ್ಲಿನ ಮೇಲೆ ಚರ್ಚೆ ನಡೆದಾಗ, ಸಿಂಗಲ್ ಪಾಯಿಂಟ್ ತೆರಿಗೆ ಹಾಕಿ ಎಂದು ಒತ್ತಾಯ ಬಂದರೂ ಕೂಡ ಮದರಾಸು ಶಾಸನ ಸಭೆಯವರು ಅದನ್ನು ಒಪ್ಪಿಕೊಳ್ಳಲಿಲ್ಲ. ಸಿಂಗಲ್ ಪಾಯಿಂಟ್ levy ಮಾಡುವುದರಲ್ಲೂ danger ಇದೆ, evasion ಆಗುತ್ತದೆ, ಆದರೆ ಜನಗಳಿಗೆ harassment ಆಗುವುದಿಲ್ಲ. ಒಂದು ಕಡೆ ವಸೂಲು ಮಾಡಿದರೆ ಬಾಕಿ ಕಡೆ ಕೊಡಬೇಕಾಗಿಲ್ಲ. flat rate of two per cent ಇದ್ದರೆ ಮೂರು ಕೈತಟಹಾಯ್ದರೆ ಜಾಸ್ತಿಯಾಗುವುದಿಲ್ಲ. ಸುಲಭವಾಗಿರುತ್ತದೆ, burden ಕಡಮೆಯಾಗುತ್ತದೆ ಎಂದು ಯೋಚನೆಮಾಡಿ ಈ ರೀತಿ ಹೆಚ್ಚು ಪದಾರ್ಥಗಳ ಮೇಲೆಲ್ಲ ಸಿಂಗಲ್ ಪಾಯಿಂಟ್ ಹಾಕಿದ್ದೇವೆ; ಕಚ್ಚಾ ಮಾಲುಗಳ ಮೇಲೆ ಕಡಮೆ ಹಾಕಿದ್ದೇವೆ, declared goods ಮೇಲೆ ಕಡಮೆ ಹಾಕಿದ್ದೇವೆ. ಹೀಗೆ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಸಮನ್ವಯಮಾಡಿ, ಸಾಧಾರಣವಾಗಿ ಹೊರೆ ಜಾಸ್ತಿ ಇರಬಾರದು ಎನ್ನುವ ದೃಷ್ಟಿಯಿಂದ ತೆರಿಗೆ ಹಾಕಿದ್ದೇವೆ.

ಸ್ವಾಮಿ, ಇನ್ನೊಂದು ವಿಚಾರ ಹೇಳುತ್ತೇನೆ. ಇವರಿಗೆ ಅಂಕಿ ಅಂಶಗಳನ್ನು ಪತ್ತೆ ಮಾಡಿದರೆ ಚೆನ್ನಾಗಿ ಅರ್ಥವಾಗುತ್ತದೆ. Per capita taxation ಅಷ್ಟು ಜಾಸ್ತಿಯಾಗುವುದಿಲ್ಲ. ಮದರಾಸು ಕಡೆಯ ಭಾಗದವರಿಗೆ ಸ್ವಲ್ಪ ಕಡಮೆಯಾಗುತ್ತದೆ, ಹೈದರಾಬಾದು ಭಾಗದವರಿಗೆ ಸ್ವಲ್ಪ ಜಾಸ್ತಿಯಾಗುತ್ತದೆ. ಕೊಡಗಿನಲ್ಲಿ ಈಗ ಸೇಲ್ಸ್ ಟ್ಯಾಕ್ಸ್ ಇಲ್ಲದೇ ಇರುವುದರಿಂದ ಅವರು ನಮ್ಮಷ್ಟೇ ಕೊಡಬೇಕಾಗುತ್ತದೆ. ಬೊಂಬಾಯಿಯಿಂದ ಬಂದಿರುವವರಿಗೆ ಒಂದೆರಡಾಣೆ per capita ಕಡಮೆಯಾಗುತ್ತದೆ. ಬೊಂಬಾಯಿಯಿಂದ ಬಂರದಿತಕ್ಕ ಮಾನ್ಯಸದಸ್ಯರು ಈ ರೀತಿ ಮಾಡಿರುವುದರಿಂದ ನಮ್ಮಲ್ಲಿದ್ದ ತೊಂದರೆಗಳು ತಪ್ಪಿಹೋದುವು. ಇದುವರೆಗೂ double point multi-point levy ಇದ್ದುದರಿಂದ ಬೇಕಾದಷ್ಟು ಫಾರಂಗಳನ್ನು ಭರ್ತಿ ಮಾಡಿಕೊಡಬೇಕಾಗಿತ್ತು. ಇದೂ ತಪ್ಪಿಹೋಯಿತು ಮತ್ತು ಲಂಚಕೊಡುವುದೂ

ತಪ್ಪಿಹೋಯಿತು ಎಂದು ತಿಳಿಸಿ, it is a simple and direct measure and it can be easily administered ಎನ್ನುವ ಅಭಿಪ್ರಾಯ ಕೊಟ್ಟರು. Not only trade interests but even the producers ಎಲ್ಲಾ ಹೇಳಿದ್ದಾರೆ. ಇಷ್ಟೆಲ್ಲ ಮಾಡಿ ಸಾಧ್ಯವಾದ ಮಟ್ಟಿಗೆ ಜನಗಳಿಗೂ ಪ್ರಿಯವಾಗಬೇಕು ಮತ್ತು ಸರ್ಕಾರಕ್ಕೆ ಬರತಕ್ಕ ತೆರಿಗೆ ಸಲೀಸಾಗಿ ಬರ ಬೇಕು ಎಂದು ಮಾಡಿದ್ದೇವೆ. ಮಾನ್ಯ ಸದಸ್ಯ ರೊಬ್ಬರು ಮಾತನಾಡುತ್ತ slab rate ಇರು ವುದರಿಂದ ಅಧಿಕಾರಿಗಳು ಲಂಚ ತಿಂದು ಐದು ಸಾವಿರದ slab rateಗೆ ಬರುವುದನ್ನೂ ಮೂರು ಸಾವಿರವೆಂದು ಮಾಡುವುದು—ಇಂಥ ಅಕ್ರಮಗಳು ನಡೆಯುವುದಕ್ಕೆ ಅವಕಾಶವಿರುವುದರಿಂದ ಆ ರೀತಿ ಅವಕಾಶ ಕೊಡಬೇಡಿ ಎಂದು ಹೇಳಿದರು. Flat rate ಇದ್ದರೆ ಉತ್ತಮ ಎಂದು ಅನೇಕ ಸಭಿಕರ ಅಭಿ ಪ್ರಾಯ ಬಂತು. ಅದನ್ನು ಗಣನೆಗೆ ತೆಗೆದುಕೊಂಡು ಮಾಡಿದ್ದರೆ, ಅದೂ ತಪ್ಪು, ಇದೂ ತಪ್ಪು ಎಂದು ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಕೊಡುವುದು ಸರಿಯಿಲ್ಲವೆಂದು ತಿಳಿಸುತ್ತೇನೆ. ಈಗ Five units ಇವೆ. ಇವುಗಳ ಯಾವುದಾದರೂ ಒಂದನ್ನು ಅನು ಸರಿಸೋಣ, ಯಾವುದು ಚೆನ್ನಾಗಿದೆಯೋ ಅದನ್ನು ಅವಲಂಬಿಸೋಣ ಎಂದು ಏನಾದರೂ ಹೇಳಿದ್ದರೆ ಚೆನ್ನಾಗಿತ್ತು—ನಾನು ಈಗಲೂ ಸಹ ಈ ರೀತಿ ಯಾವುದಾದರೂ ಒಂದು ಭಾಗದಲ್ಲಿರುವಂತೆ ಮಾಡೋ ಣವೆಂದರೆ ಒಪ್ಪಿಕೊಳ್ಳುತ್ತೇನೆ. ಮದರಾಸಿನಲ್ಲಿ ರುವಂತೆ ಮಾಡೋಣವೆಂದರೆ ಅದಕ್ಕೂ ಒಪ್ಪಿಕೊಳ್ಳು ತ್ತೇನೆ. ಬೊಂಬಾಯಿಯಲ್ಲಿರುವಂತೆಮಾಡೋಣವೆಂದರೆ ಅದನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ ಮೈಸೂರಿನಲ್ಲಿ single point try ಮಾಡಿ ಅದರಿಂದ ಸ್ವಲ್ಪ ಅನು ಕೂಲವಿದೆ ಎಂದು ಕಂಡುಬಂದುದರಿಂದ ಮತ್ತು ವರ್ತಕರೂ, ಛೇಂಬರ್ ಆಫ್ ಕಾಮರ್ಸ್‌ನವರೂ ಸಹ single point levy ಉತ್ತಮ, ಜನರಿಗೆ harassment ತಪ್ಪುತ್ತದೆ, ಸರ್ಕಾರಕ್ಕೆ ಆದಾಯ ಸ್ವಲ್ಪ ಕಡಮೆಯಾಗಬಹುದು ಆದರೂ ಲಂಚರುಷುವತ್ತು ತಪ್ಪಿಹೋಗುತ್ತದೆ ಎಂದು ಹೇಳಿದುದರಿಂದ, ಅವರೆಲ್ಲರ ಅಭಿಪ್ರಾಯಗಳನ್ನೂ ಗಣನೆ ತೆಗೆದುಕೊಂಡು, ಸಾಧ್ಯ ವಾದಮಟ್ಟಿಗೂ single point levy ಹಾಕಿದ್ದೇವೆ. ಉಳಿದುವುಗಳನ್ನು ಅಂದರೆ ಎಲ್ಲಿ sources ಗೊತ್ತಾಗು ವುದಿಲ್ಲವೋ, ಯಾರು ಮೊದಲು receive ಮಾಡುತ್ತಾ ರೆಂದು ತಿಳಿಯುವುದಿಲ್ಲವೋ ಅಂಥ ಕೆಲವು most minor items ಮಾತ್ರ ಈ ಟರ್ನ್ ಓವರ್‌ಗೆ ಬಿಟ್ಟಿ ದ್ದೇವೆ. ಎಲ್ಲೆಲ್ಲಿ first dealer ಯಾರುಎಂದು ಗೊತ್ತಾ ಗುತ್ತದೆಯೋ, ಅಲ್ಲೆಲ್ಲ single point levy ಹಾಕಿ ದ್ದೇವೆ. ಕೇರಳ ಮತ್ತು ಮದರಾಸು ರಾಜ್ಯಗಳಲ್ಲಿ ರುವ ತೆರಿಗೆಯ ದರಗಳನ್ನು ನೋಡಿದರೆ ನಾವು ಬಹಳ ಕಡಮೆ ಮಾಡಿದ್ದೇವೆ ಎಂಬುದು ಗೊತ್ತಾಗುತ್ತದೆ. ಬೊಂಬಾಯಿಯಿಂದ ಬಂದಿರತಕ್ಕವರ ಅನುಭವ, ಸೆಲೆಕ್ಟ್ ಕಮಿಟಿಯವರ ಅನುಭವ ಮತ್ತು ನಮ್ಮ ಅನುಭವದ ಮೇಲೆ ಮಾಡಿರುವುದನ್ನು ಇಷ್ಟು ಬೇಗ ತೊಗಲಕ್‌ನ ಕಾಲದಲ್ಲಿದ್ದ ಹಾಗೆ ಎಂದು ಹೇಳಿದರೆ ಅದು ಆಧಾರಪೂರ್ವಕವಾಗಿರಬೇಕು. ಆಧಾರ ರಹಿತವಾಗಿ ಎಷ್ಟು ಮಾತನಾಡಿದರೆ ತಾನೆ ಏನು? ಅದನ್ನು ಯಾರೂ ಮೆಚ್ಚುವುದಿಲ್ಲ. Per capita taxation ಎಲ್ಲರಿಗೂ ಜಾಸ್ತಿ ಮಾಡಿದರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಐದು ಭಾಗಗಳಲ್ಲಿಯೂ uniform ಆಗಿ per capita ಜಾಸ್ತಿಇದ್ದರೆ ಅದನ್ನು you have a right to object, ನಾನೂ ಒಪ್ಪಿ ಕೊಳ್ಳುತ್ತೇನೆ. ಹಾಗಿಲ್ಲದೆ ಇದರಿಂದ ಕೆಲವರಿಗೆ ಅನು ಕೂಲವಾಗುತ್ತದೆ ಮತ್ತೆ ಕೆಲವರು they have to pay penalty for re-organisation. ಈ ಎಲ್ಲ ದೃಷ್ಟಿಯಿಂದ ನಾವು ತೆರಿಗೆಯನ್ನು ಸಮನ್ವಯ ಮಾಡಿದ್ದೇವೆ. ಇದರಲ್ಲಿ ಆಡಳಿತದ ತೊಂದರೆಗಳು ಕೆಲವಿವೆ. ಹುಬ್ಬಳ್ಳಿಯಿಂದ ದಾವಣಗೆರೆಗೆ ಹಿಂದೆ ಒಂದು ಪದಾರ್ಥವನ್ನು ಕಳುಹಿಸಿದರೆ inter-State ಆಗುತ್ತಿತ್ತು, ಈಗ inter-State ಆಗುತ್ತದೆ. ಬೊಂಬಾಯಿ ಭಾಗದಿಂದ ಬಂದಿರುವವರು ಈಗ ಒಂದೇ ರಾಜ್ಯವಾಗಿದ್ದರೂ ಕೂಡ ಬೊಂಬಾಯಿ ಸೇಲ್ಸ್ ಟ್ಯಾಕ್ಸ್ ಆಕ್ಟ್ ಪ್ರಕಾರ inter-State ಮಾಡ ಲಾಗಿದೆ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಮೈಸೂರು ರಾಜ್ಯಕ್ಕೆ ಸೇರಿದ್ದರೂ ಪರಿಹಾರ ದೊರೆಯುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈಗ administer ಮಾಡುವುದಕ್ಕೆ ಬಹಳ ತೊಂದರೆಗಳಿವೆ. Foodgrains ಮೇಲೆ ಈಗ ತೆರಿಗೆ ಕೊಡುತ್ತಿದ್ದೇವೆ. ಅದನ್ನು ತೆಗೆದು ಹಾಕಬೇಕೆಂದು ಹೇಳಿದರು. ಹೈದರಾಬಾದ್ ಕಡೆ ಯವರೂ ಆಹಾರ ಧಾನ್ಯಗಳ ಮೇಲೆ ತೆಗೆದುಹಾಕಿ pulses ಮೇಲೆ ಹಾಕಬಹುದು ಎಂದು ಹೇಳಿದರು. ಅವರು ಈಗ pulses ಮೇಲೆ ಎರಡು ಪರ್‌ಸೆಂಟ್‌ಕೊಡು ತ್ತಿದ್ದಾರೆ. ನಾವು ಒಂದು ಪರ್‌ಸೆಂಟ್ ಹಾಕಿದ್ದೇವೆ. ಇಷ್ಟಕ್ಕೆಲ್ಲಾ ಮುನಿಸಿಕೊಂಡರೆ ಏನು ಮಾಡುವುದಕ್ಕಾ ಗುತ್ತದೆ? ಮೆಣಸಿನಕಾಯಿಯ ಮೇಲೆ ಆ ಕಡೆಯಲ್ಲಿ ಕೊಡುತ್ತಿದ್ದಾರೆ. ಬೊಂಬಾಯಿ ಭಾಗದಲ್ಲಿ ಮಾತ್ರ exemption ಇತ್ತು, ನಮ್ಮಲ್ಲಿ ಇತ್ತು. ಸರ್ಕಾರಕ್ಕೆ ನಾಲ್ಕುಕಾಸು ಬರಲಿ ಎಂದು single point light levy ಹಾಕಿದ್ದೇವೆ. ಒಂದೊಂದನ್ನೂ ವಿಮರ್ಶೆಮಾಡಿ ಹೀಗೆ ಮಾಡಿದ್ದೇವೆ. ತೀರಾ ಅನ್ಯಾಯ ಮಾಡಬೇಕೆಂದು ಯಾರು ತಾನೇ ಮಾಡು ವುದಕ್ಕಾಗುತ್ತದೆ? ಎದುರು ಪಕ್ಷದಲ್ಲಿರುವ ಸದಸ್ಯರು ಜನಗಳ ಮೂಲಕ ಹೇಗೆ ಚುನಾಯಿತರಾಗಿ ಬಂದಿ ದ್ದಾರೋ ಅದೇ ರೀತಿ ಈ ಕಡೆ ಇರುವ ನಾವೂ ಚುನಾಯಿತರಾಗಿ ಬಂದಿದ್ದೇವೆ. ಅವರು ಜನಗಳ ಮೇಲೆ ಪ್ರೇಮವಿಟ್ಟುಕೊಂಡಿರುವ ಹಾಗೆಯೇ ನಾವೂ ಇಟ್ಟುಕೊಂಡಿದ್ದೇವೆ. ಆದ್ದರಿಂದ ತೆರಿಗೆಯ ಭಾರ ವನ್ನು ಜನಗಳು ಎಷ್ಟರಮಟ್ಟಿಗೆ ಹೊರಬಲ್ಲರು ಎಂದು ತಿಳಿದುಕೊಂಡು ತೆರಿಗೆಯನ್ನು ಹಾಕಿದ್ದೇವೆ. ದುಬಾರಿಯಾಗಿ ತೆರಿಗೆಯನ್ನು ಹಾಕಿ ರಾಜ್ಯವನ್ನು ನಿಮ್ಮ ಕೈಗೆ ಬಿಟ್ಟುಹೋಗುವುದಕ್ಕೆ ನಾವು ಬರು ತ್ತೇವೆಯೇ? (ನಗು) ಹಾಗಿಲ್ಲ, ಈಗಲೇ ಹೀಗೆಲ್ಲ ಮಾತನಾಡುವವರು ಮುಂದೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ ಬಂದ ಮೇಲೆ ಹೇಗೆ ಮಾತನಾಡುತ್ತೀರಿ ಎಂದುಗೊತ್ತಾಗುತ್ತದೆ. Higher slab ಬಂದಮೇಲೆ steep ಆಗಿ ಹಾಕಬೇಕು ಎಂದು ಹೇಳುತ್ತೀರೋ ಇಲ್ಲವೋ ಗೊತ್ತಾಗುತ್ತದೆ. ನಾವು ಎಲ್ಲ ಅಂಶ ಗಳನ್ನೂ ಯೋಚನೆ ಮಾಡಿದ್ದೇವೆ. ನಿಮ್ಮಂಥವರೆಲ್ಲರ ಅಭಿಪ್ರಾಯಗಳನ್ನೂ ಪಡೆದು ಎಷ್ಟರ ಮಟ್ಟಿಗೆ ತೆರಿಗೆ ಹಾಕಬಹುದು ಎಂದು ಯೋಚನೆಮಾಡಿದ್ದೇವೆ.

ಅಡಿಕೆಯ ವಿಚಾರದಲ್ಲಿ, both producers and dealers ಬಂದು ಹೇಳಿದರು. ಈಗಿನ ಮಾರಾಟದ ಬೆಲೆಯೊಳಗೆ ಆರು ಪರ್‌ಸೆಂಟ್ ಹಾಕಿದರೂ ತಡೆಯು ತ್ತದೆ. ಆದರೆ ಪಕ್ಕದ ರಾಜ್ಯದಲ್ಲಿ ಎರಡು ಪರ್‌ಸೆಂಟ್ multi-point ಇರುವಾಗ ನಾವು ಆರು ಪರ್‌ಸೆಂಟ್ ಹಾಕಿದರೆ trade divert ಆಗುತ್ತದೆ. ಆದುದರಿಂದ ನಾವೂ ಎರಡು ಪರ್‌ಸೆಂಟ್ ಹಾಕಿದ್ದೇವೆ. ಕಾಫಿಯ ಮೇಲೆ ಆರು ಪರ್‌ಸೆಂಟ್ ಹಾಕುವುದಕ್ಕೆ ಕಾಫಿ ಬೋರ್ಡಿ ನವರೂ ಒಪ್ಪಿಕೊಂಡಿದ್ದರು. ಆದರೆ ಮದರಾಸಿನಲ್ಲಿ

(SRI T. MARIAPPA)

ಐದು ಪರ್‌ಸೆಂಟ್ ಇರುವುದರಿಂದ ನಾವು ಕಡಮೆ ಮಾಡಬೇಕಾಯಿತು. ನಾವು ಈ ದೇಶದ ವ್ಯಾಪಾರವನ್ನು ನೋಡಬೇಕು, ಡೀಲರ್ಸ್‌ನ್ನು ನೋಡಬೇಕು, ಕನ್ಸ್ಯೂಮರ್‌ಗಳನ್ನು ನೋಡಬೇಕು.

ಇನ್ನೂ ಒಂದು ವಿಷಯವಿದೆ. ಏನೆಂದರೆ ತೆರಿಗೆಗಳೆಲ್ಲ ತೀರ ಬಡವರ ಮೇಲೆಯೇ ಬೀಳುವುದಿಲ್ಲ. Indirect taxations ಕನ್ಸ್ಯೂಮರ್ ಮೇಲೆ ಬೀಳುತ್ತದೆ. ಇದು ಪುಣ್ಯವಂತರ ಮೇಲೆ ಮಾತ್ರ ಬೀಳುತ್ತದೆಂದು ಸರ್ಕಾರದವರು ಎಂದೂ ಹೇಳುವುದಿಲ್ಲ. Luxury articles ಮೇಲೆ ಜಾಸ್ತಿ ತೆರಿಗೆ ಹಾಕಿದ್ದೇವೆ. ಕೆಲವು ಐಟಂಗಳು ಮೊದಲನೆಯ ಷೆಡ್ಯೂಲಿನಲ್ಲಿರುವುದರ ಮೇಲೆ single point plus multi-point ಹಾಕಿದ್ದೇವೆ. ಎರಡು ಕೈ ಬದಲಾಯಿಸಿದರೆ ಏಳು ಪರ್‌ಸೆಂಟ್ ಆಗುತ್ತದೆ. ಮೂರುಕೈ ಬದಲಾಯಿಸಿದರೆ 11 ಪರ್‌ಸೆಂಟ್ ಆಗುತ್ತದೆ. ಆದುದರಿಂದ luxury articles ಮೇಲೆ ಹೆಚ್ಚಾಗಿ ಹಾಕಿದ್ದೇವೆ. ಇವು ಬಡವರು ಕೊಂಡುಕೊಳ್ಳತಕ್ಕವುಗಳಲ್ಲ. ಐದನೆಯ ಷೆಡ್ಯೂಲಿನಲ್ಲಿ ತೋರಿಸಿರುವ ವಸ್ತುಗಳಿಗೆಲ್ಲ ವಿನಾಯಿತಿ ಕೊಟ್ಟಿದೆ. ಹಳ್ಳಿಯ ಗಾಣ exempt ಆಗಿದೆ. 'Handloom products, Cumblies woven on handlooms, articles produced by members of Cottage Industrial Co-operative Societies recognised by the Commissioner—ಇವು exempt ಆಗಿವೆ. Baskets, mats, ಇವೆಲ್ಲ ಗೃಹ ಕೈಗಾರಿಕೆಗಳೆಂದು ಒಂದು ಲಿಸ್ಟ್ ಮಾಡಿ ಅದನ್ನೆಲ್ಲ exempt ಮಾಡಿದ್ದೇವೆ. ಇವೆಲ್ಲ ಸಾಮಾನ್ಯವಾಗಿ ಹಳ್ಳಿಯವರು ಕೊಂಡುಕೊಳ್ಳತಕ್ಕ ವಸ್ತುಗಳು.

ಸಾಮಾನ್ಯವಾಗಿ ಹಳ್ಳಿಯವರು ಉಟ್ಟುಕೊಳ್ಳುವ ಪಂಚೆಯ ಮೇಲೆ ತೆರಿಗೆ ಹಾಕಿದ್ದಾರೆಂದು ಹೇಳಿದರು. ಆದರೆ ಹಳ್ಳಿಯವರೆಲ್ಲ ಫಿನ್ಲೆ ಪಂಚೆಗಳನ್ನೇ ಉಪಯೋಗಿಸಬೇಕು ಎಂದು ಹೇಳುತ್ತಿಲ್ಲ. ಅವರು ಉಟ್ಟುಕೊಳ್ಳಬೇಕು; ಸುಖ ಬೇಕು ಎಂದರೆ ತೆರಿಗೆಕೊಡಬೇಕು. ಅನಂತರ ಉಪಯೋಗಿಸಬೇಕು. ಅವರು ಅರ್ಥಮಾಡಿಕೊಳ್ಳಬೇಕು. ಸಾಮಾನ್ಯವಾಗಿ poorer section ಎಂದರೆ ಬಡವರು ಉಪಯೋಗಿಸುವ Essential articlesಗಳಲ್ಲಿ ಶೇಕಡ 90 ರಷ್ಟು ವಸ್ತುಗಳಿಗೆ ವಿನಾಯಿತಿ ಕೊಡಲಾಗಿದೆ. I can give details. ಎಲ್ಲೋ ಕೆಲವು ಎಂದರೆ ಆಲೂಗೆಡ್ಡೆ, ಈರುಳ್ಳಿ ಇವುಗಳ turnover ಮೇಲೆ ಬೀಳುತ್ತದೆ. It is not even 1,000 of a fraction.

ಈಗಾಗಲೇ 7,500 ರೂಪಾಯಿಗಳಿಟ್ಟಿರುವುದರಿಂದ many people get exemption. ಸುಮ್ಮಸುಮ್ಮನೆ ಹೇಳಿಬಿಟ್ಟರೆ ಜನ ಕೇಳುವುದಿಲ್ಲ.

ಆದುದರಿಂದ ಈ ಸೆಲೆಕ್ಟ್ ಸಮಿತಿಯ ವರದಿ ಎಲ್ಲ ದೃಷ್ಟಿಯಿಂದ ಸರ್ವಸಮ್ಮತವಾಗಿದೆ. ಇದನ್ನು ಆಲೋಚನೆಮಾಡಿ ನಮ್ಮ ಉಭಯ ಪಕ್ಷದವರೂ ಒಪ್ಪಿಕೊಳ್ಳಬೇಕೆಂದು ಮಾತ್ರ ಹೇಳುತ್ತೇನೆ.

Mr. SPEAKER.—Now I put the motion to the House. The question is:

> "That the Mysore Sales-tax Bill, 1957, as reported by the Select Committee, be taken into consideration."

The motion was adopted.

Mr. SPEAKER.—Clause 2. The question is:

> "That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clauses 3 and 4. The question is:

> "That Clauses 3 and 4 stand part of the Bill."

The motion was adoped.

Clauses 3 and 4 were added to the Bill.

Mr. SPEAKER.—Clauses 5 and 6 will be taken up together. There is an amendment by Sri V. S. Patil. I will finish the amendment tabled by the other side first.

Sri V. S. PATIL.—My amendment is to the proposed clause of the Select Committee.

Sri T. MARIAPPA.—I beg to move:

> "That for clause 5 the following clause shall be substituted."

5. *Levy of tax on sale or purchase of goods.*—(1) Every dealer shall pay for each year tax on his total turnover at the rate of two per cent of such turnover:

Provided that if and to the extent to which such turnover relates to pulses or to articles made of gold or silver, the tax shall be calculated at the rate of one per cent of such turnover.

(2) On the first sale of any of the goods mentioned in column (2) of the First Schedule by a dealer who is liable to tax under sub-section (1), a tax at the rate specified in the corresponding entry of column (3) of the said Schedule, shall be paid by the dealer on his turnover in each year relating to such goods, and the said tax shall

be in addition to the tax to which such dealer is liable under sub-section (1).

(3) Notwithstanding anything contained in sub-section (1), the tax under this Act shall be levied —

(*a*) in the case of the sale of any of the goods mentioned in column (2) of the Second Schedule, by the first or the earliest of successive dealers in the State who is liable to tax under this section, a tax at the rate specified in the corresponding entry of column (3) of the said Schedule, on the turnover of sales of such dealer in each year relating to such goods;

(*b*) in the case of purchase of any of the goods mentioned in column (2) of the Third Schedule, at the rate and only at the point specified in the corresponding entries of columns (4) and (3) of the said Schedule, on the dealer liable to tax under this Act, on his turnover of purchases in each year relating to such goods.

(4) Notwithstanding anything contained in sub-section (1), the tax under this Act shall be levied in the case of the last purchase of any of the declared goods mentioned in column (2) of the Fourth Schedule at the rate specified in the corresponding entry of column (3) of the said Schedule, on the dealer liable to tax under this Act, on his turnover of purchases in each year relating to such goods:

Provided that no tax shall be levied in respect of the last purchase inside the State, if the said goods are intended for sale in the course of inter-State trade or commerce.

Explanation I.—The expression "last purchase in the State" means the transaction in which a dealer registered under this Act.—

(*i*) purchases from another such dealer declared goods for use by the purchaser in the manufacture of goods for sale or for use by the purchaser in the execution of any contract; or

(*ii*) purchases declared goods from another such dealer for sale to a dealer not registered under this Act or to a consumer in the State.

Explanation II.—The expression "declared goods" means goods declared under section 14 of the Central Sales Tax Act, 1956 (Central Act 74 of 1956), to be of special importance in inter-State trade or commerce.

(5) A dealer whose total turnover in any year is less than seven thousand and five hundred rupees shall not be liable to pay tax for that year under this section.

Explanation.—For purposes of this sub-section, the total turnover shall be deemed to include—

(*i*) the turnover in respect of the sale or purchase of goods exempted from tax by this Act, and

(*ii*) the aggregate of the sale prices received and receivable by the dealer in respect of sales of any goods in the course of inter-State trade or commerce as determined in accordance with the provisions of the Central Sales Tax Act, 1956 (Central Act 74 of 1956), as also in respect of sales in the course of export.

(6) For the purposes of this section and other provisions of this Act, turnover shall be determined in accordance with such rules as may be prescribed.

(7) The tax shall be assessed, levied and cullected in such manner and in suct instalments, if any, as may be prescribed:

Provided that in respect of the same transaction of sale, the buyer or the seller, but not both, as determined by such rules as may be prescribed, shall be taxed:

Provided further that in the case of an assessment made under sub-section (2), (3) or (4), the burden of proving that any sale or purchase effected by a dear is not liable to tax shall lie on the dealer.

(8) The tax for each year may be assessed, levied and collected in advance during the year in monthly or quarterly instalments, and for that purpose a dealer may be required to furnish either an advance estimate of his turnover for the year, or periodical returns of the actual turnover as may be prescribed. The assessing authority may determine the amount

(SRI T. MARIAPPA)

of tax payable in respect of any period on the basis of the estimate or returns furnished by the dealer or on the basis of transactions of the dealer in the previous year and on such assessment, the dealer shall pay the sum demanded within such time as may be fixed by such authority:

Provided that the monthly or quarterly instalment shall be collected only at the expiry of the month or quarter, as the case may be, in respect of which the instalment is payable.

(9) Subject to such rules as may be prescribed, the assessing authority may assess a dealer for any year as if his transactions in such year had been the same as in the previous year.

Mr. SPEAKER.—I will put clause 5. I must say one word here. I will put amendment to clause 5 first and then Sri V. S. Patil's amendment will be treated as on amendment to an amendment. I went through the whole list and I could not understand whether it was to the original clause or to the amendment.

Sri V. S. PATIL.—I presume, according to the practice, that when the Report of the Select Committee comes before the House, that Report is the motion which we have to consider. We need not go to the Bill. That is why I presumed that the whole Report was before the House.

Mr. SPEAKER.—There is a little difficulty. The difficulty is that Government say that whatever recommendation made by the Select Committee would be moved by way of amendment.

Sri J. H. SHAMSUDDIN.—Rules 72 and 73 do not contemplate that the Report of the Select Committee shall be taken as an amendment. Government will have to move a separate amendment. That appears to be the intention of rules 72 and 73.

Mr. SPEAKER.—In this case, the amendments are moved by the Government.

Sri T. MARIAPPA.—There is the recommendation of the Governor also.

Mr. SPEAKER.—Yes; there is no trouble about that. Amendment moved.

"For Clause 5 the following clause shall be substituted, namely:—

5. *Levy of tax on sale of purchase of goods*.—(1) Every dealer shall pay for each year tax on his total turnover at the rate of two per cent of such turnover:

Provided that if and to the extent to which such turnover relates to pulses or to articles made of gold or silver, the tax shall be calculated at the rate of one per cent of such turnover.

(2) On the first sale of any of the goods mentioned in column (2) of the First Schedule by a dealer who is liable to tax under sub-section (1), a tax at the rate specified in the corresponding entry of column (3) of the said Schedule, shall be paid by the dealer on his turnover in each year relating to such goods, and the said tax shall be in addition to the tax to which such dealer is liable under sub-section (1).

(3) Notwithstanding anything contained in sub-section (1), the tax under this Act shall be levied—

(*a*) in the case of the sale of any of the goods mentioned in column (2) of the Second Schedule, by the first or the earliest of successive dealers in the State who is liable to tax under this section, a tax at the rate specified in the corresponding entry of column (3) of the said Schedule, on the turnover of sales of such dealer in each year relating to such goods;

(*b*) in the case of purchase of any of the goods mentioned in column (2) of the Third Schedule, at the rate and only at the point specified in the corresponding entries of columns (4) and (3) of the said Schedule, on the dealer liable to tax under this Act, on his turnover of purchases in each year relating to such goods.

(4) Notwithstanding anything contained in sub-section (1), the tax under this Act shall be levied in the case of the last purchase of any of the declared goods mentioned in column (2) of the Fourth Schedule at the rate specified in corresponding entry of

column (3) of the said Schedule, on the dealer liable to tax under this Act, on his turnover of purchases in each year relating to such goods:

Provided that no tax shall be levied in respect of the last purchase inside the State, if the said goods are intended for sale in the course of inter-State trade or commerce.

Explanation I.—The expression "last purchase in the State" means the transaction in which a dealer registered under this Act—

(*i*) purchases from another such dealer declared goods for use by the purchaser in the manufacture of goods for sale or for use by the purchaser in the execution of any contract; or

(*ii*) purchases declared goods from another such dealer for sale to a dealer not registered under this Act or to a consumer in the State.

Explanation II.—The expression "declared goods" means goods declared under section 14 of the Central Sales Tax Act, 1956 (Central Act 74 of 1956), to be of special importance in inter-State trade or commerce.

(5) A dealer whose total turnover in any year is less than seven thousand and five hundred rupees shall not be liable to pay tax for that year under this section.

Explanation.—For purposes of this sub-section, the total turnover shall be deemed to include—

(*i*) the turnover in respect of the sale or purchase of goods exempted from tax by this Act, and

(*ii*) the aggregate of the sale prices received and receivable by the dealar in respect of sales of any goods in the course of inter-State trade or commerce as determined in accordance with the provisions of the Central Sales Tax Act, 1956 (Central Act 74 of 1956), as also in respect of sales in the course of export.

(6) For the purposes of this section and other provisions of this Act, turnover shall be determined in accordance with such rules as may be prescribed.

(7) The tax shall be assessed, levied and collected in such manner and in such instalments, if any, as may be prescribed:

Provided that in respect of the same transaction of sale, the buyer or the seller, but not both, as determined by such rules as may be prescribed, shall be taxed:

Provided further that in the case of an assessment made under sub-section (2), (3) or (4), the burden of proving that any sale or purchase effected by a dealer is not liable to tax shall lie on the dealer.

(8) The tax for each year may be assessed, levied and collected in advance during the year in monthly or quarterly instalments, and for that purpose a dealer may be required to furnish either an advance estimate of his turnover for the year, or periodical returns of the actual turnover as may be prescribed. The assessing authority may determine the amount of tax payable in respect of any period on the basis of the estimate or returns furnished by the dealer or on the basis of transactions of the dealer in the previous year and on such assessment, the dealer shall pay the sum demanded within such time as may be fixed by such authority:

Provided that the monthly or quarterly instalment shall be collected only at the expiry of the month or quarter, as the case may be, in respect of which the intalment is payable.

(9) Subject to such rules as may be prescribed, the assessing authority may assess a dealer for any year as if his transactions in such year had been the same as in the previous year."

Sri V. S. Patil will now move his amendments.

Sri K. PUTTASWAMY.—Sir, I wish to draw your attention to rule No. 77. Now, there are two amendments to clause 5. One amendment stands in the name of the Minister in charge of the bill and another in the name of Sri V. S. Patil. Rule 77 prescribes the mode in which these two amendments have to be treated. Rule 77 states:

"Amendments of which notice has been given shall, as far as

(SRI K. PUTTASWAMY)

practicable, be arranged in the list of amendments issued from time to time, in the order in which they may be called. In arranging amendments raising the same question at the same point of a clause, precedence may be given to an amendment to be moved by the member in charge of the Bill. Subject as aforesaid, amendments may be arranged in the order in which notice of them is received."

Now there are two amendments. Assuming that the amendment moved by the Minister in-charge of the Bill is accepted by the House, then there will be no occasion for the House to consider the other amendment, because the incidence of taxation proposed by the Minister is definitely higher than the incidence of taxation mentioned in the amendmet given notice of by Sri V. S. Patil. Therefore I submit that it would not be in order for Sri V. S. Patil to move his amendment.

MR. SPEAKER.— Of course, there is a good deal of force in what Hon'ble Member Sri Puttaswamy has said. But at the same time, I would like to bring it to his notice that Sri V. S. Patil, in giving the amendment, has definitely said that his amendment was to the Report of the Select Committee. Therefore his amendment is in the nature of an amendment to the amend ment proposed by the Member in-charge of the Bill. That is the reason why I had given him a chance to move his amendment.

SRI V. S. PATIL.—I beg to move :

"(i) In sub-clause (1) for the words 'two per cent of such turnover' the words 'at the rate of ½ per cent of the turnover if the annnal turnover does not exceed Rs. 15,000, at the rate of one per cent of the turnover. if the annual turnover exceeds Rs. 15,000 but does not exceed Rs. 50,000 and at the rate of two per cent of the turnover if the annual turnover exceeds Rs. 50,000' shall be substituted."

(ii) 'In the proviso to sub-clause (1) the words "to pulses or" shall be deleted."

MR. SPEAKER.—Amendment moved:

"(i) In sub-clause (1) for the words 'two per cent of such turnover' the words 'at the rate of ½ per cent of the turnover if the annual turnover does not exceed Rs. 15,000, at the rate of one per cent of the turnover if the annual turnover exceeds Rs. 15,000 but does not exceed Rs, 50,000 and at the rate of two per cent of the turnover if the annual turnover exceeds Rs. 50,000' shall be substituted."

"(ii) In the proviso to sub-clause (1) the words 'to pulses or' shall be deleted."

Shall we rise ?

SRI T. MARIAPPA.—I think if the Hon'ble Members will bear with me we can sit for one hour more and finish this Bill.

SRI V. S. PATIL.—We are here from 1 P.M. and it will be too late.

MR. SPEAKER.— Recently Bombay Legislature sat for nine hours. It may not take more than half an hour and I thinkwe may finish the business.

SRI V. S. PATIL. –It is not possible Sir. I am very much exhausted. I am not going to speak on other amendments. So we may take up this tomorrow.

AN HON'BLE MEMBER.—Hon'ble the Speaker has already arrived at some conclusion that after six of the clock we shall not sit.

MR. SPEAKER.—There are exceptions.

SRI T. MARIAPPA.—May I make an appeal to this Hon'ble House ? After all, the days before us are not many and we have to complete four taxation measures. The desire of the Government is to see that the serious financial handicap is eased to the extent possible. Moreover, before the Finance Commission sends up its recommendations, we have to show our earnestness. After all the whole thing has been discussed

threadbare. Even the so-called present amendment has been discussed and Sri Narasimhan has sent a minute of dissent. Therefore, I crave the indulgence of Hon'ble Members to sit for a little more time and finish it off.

Sri C. J. MUCKANNAPPA.— I can appreciate the feelings of the Hon'ble Finance Minister. . . .

Mr. SPEAKER.—We shall do like this. On Thursday we shall drop the item of question hour and utilise that time for passing this Bill.

Sri K. PUTTASWAMY.—If the Chair has not yet given a decision, I would like to submit that the question hour may be saved.

Mr. SPEAKER.—All right. It does not matter. I have not decided yet, and I would like to have the question hour because we are not sitting for long and we are adjourning soon. If the Hon'ble Members do not like to forego the question hour, I respect their wishes. The point is, we will have to finish this definitely on Thursday within one hour.

Sri T. MARIAPPA.—At least clause 5 of this Bill may be taken up and finished.

Sri L. S. VENKAJI RAO.—If Hon'ble the leader of the Opposition and other Hon'ble Members agree to finish this off on Thursday by three of the clock, then we may consider the request namely...

Mr. SPEAKER.—It is the desire of the Hon'ble House that on Thursday this should be finished by 3 o' clock.

BOARD OF INDUSTRIES

Election Results.

Mr. SPEAKER.—Now I shall announce the result of the election to the Board of Industries :

"In connection with the election to the Board of Industries as the number of candidates is equal to the number of places to be filled by election, the following members are declared duly elected and consequently there will be no election in this behalf:

1. Sri K. P. Gadag
2. Sri K. Puttaswamy
3. Sri C. K. Rajaiah Setty.

The House will now rise and meet on Thursday at 1 P.M.

The House adjourned at Ten Minutes past Six of the Clock to meet again on Thursday the 8th August 1957 at One of the Clock.

W D 4011—GPB—900—10-2-1958